ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 28 ಜುಲೈ 12, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಸಿ. ಪಿ. ಐ. [ಎಂ] – ಸಿ. ಪಿ. ಐ. ರಾಜ್ಯ ಘಟಕಗಳ ಜಂಟಿ ಕರೆ

ರಾಜ್ಯಾದ್ಯಂತ ಜುಲೈ 17 ರಂದು ಪ್ರತಿಭಟನೆ, ಆಗಸ್ಟ್‌ನಲ್ಲಿ ಬಂದ್

ಸಿಪಿಐ[ಎಂ], ಸಿಪಿಐ ಜಿಲ್ಲಾ ಘಟಕಗಳು ಬೆಂಗಳೂರಿನಲ್ಲಿ ಆರಂಭಿಸಿದ ಬೆಲೆ ಏರಿಕೆ ವಿರುದ್ಧ ಜಂಟಿ ಹೋರಾಟವನ್ನು ಇಡೀ ರಾಜ್ಯಕ್ಕೆ ಹಬ್ಬಿಸುವ ತೀರ್ಮಾನವನ್ನು ಕಾಂ. ಸೂರಿ, ಹಾಗೂ ಕಾಂ. ಕೃಷ್ಣನ್ ಪತ್ರಿಕಾಗೋಷ್ಠಿಯಲ್ಲಿ ದಿ. 7 ರಂದು ಬಹಿರಂಗ ಪಡಿಸಿದರು. ತನ್ನ ನೇತೃತ್ವದ ಕೇಂದ್ರ ಸರಕಾರದ ಒತ್ತಾಯವೇ ಬೆಲೆ ಏರಿಕೆಗೆ ಕಾರಣ ಎಂಬುದನ್ನು ಮರೆಸಲು ಕಾಂಗ್ರೆ ಬಂದ್ ಮಾಡುವ ಯತ್ನಕ್ಕೆ ನಮ್ಮ ಬೆಂಬಲವಿಲ್ಲ ಎಂದು ಘೋಷಿಸಿದರು.

ಡಮ್ಮಿ ಅಧ್ಯಕ್ಷ ಅಥವಾ ಚೈತನ್ಯಶಾಲಿ ಅಧ್ಯಕ್ಷರ ನಡುವಿನ ಆಯ್ಕೆಯಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ವಿನಂತಿ ಮಾಡಿದರು.

ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ ಪಕ್ಷಗಳ ಬೆಂಗಳೂರು ಜಿಲ್ಲಾ ಘಟಕಗಳು ವಿದ್ಯುತ್‌ದರ, ಹಾಲಿನ ಹಾಗೂ ಹೋಟೆಲ್ ತಿಂಡಿಗಳ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಕೆ.ಇ.ಬಿ. ಮುಂದೆ ಧರಣಿ ನಡೆಸಿದವು. ಬೆಂಗಳೂರು ನಗರದ ವಿವಿಧ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ, ವಿದ್ಯುತ್ ದರ ಏರಿಕೆಯನ್ನು ಪ್ರತಿಭಟಿಸಿದವು. ದಿನಾಂಕ 9.6.87 ರಂದು ಪುರಭವನದಲ್ಲಿ ಸಮಾವೇಶ ನಡೆಸಿದವು. ಮಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಪ್ರದರ್ಶನಗಳೂ, ಚಿತ್ರದುರ್ಗದಲ್ಲಿ 22.5.87ರಂದು ಬಂದ್ ಕಾರ್ಯಕ್ರಮ ನಡೆಸಿದವು. ಇವು ಯಾವುದಕ್ಕೂ ಜನತಾ ಸರ್ಕಾರದಿಂದ ಪ್ರತಿಕ್ರಿಯೆ ಬಾರದಾಗ ಜೂನ್ 26 ರಂದು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿನಲ್ಲಿ ಬಂಧನಕ್ಕೊಳಗಾಗಿ ಪ್ರತಿಭಟಿಸಿದವು.

1985ರ ಚುನಾವಣೆಯಲ್ಲಿ ಬಹುಮತ ಪಡೆದ ನಂತರ ಜನತಾ ಸರ್ಕಾರ ಜನಾಭಿಪ್ರಾಯಕ್ಕೆ ಸ್ಪಂದಿಸದೆ, ಜನ ವಿರೋಧಿ ಕ್ರಮಗಳನ್ನು ಯಾವುದೇ ಎಗ್ಗಿಲ್ಲದೆ ಕೈಗೊಳ್ಳುತ್ತಿರುವುದನ್ನು ಕಾಣಬಹುದು. ಕೇಂದ್ರದ ಕಾಂಗ್ರೆಸ್ ಸರ್ಕಾರದ ಚಿತಾವಣೆಗೊಳಗಾಗಿ, ಹಾಗೂ ವಿಶ್ವ ಬ್ಯಾಂಕ್ ಸಾಲದ ಆಸೆಗೆ ಬಲಿಬಿದ್ದು ಅವರ ಪ್ರೇರಣೆಯಂತೆ ಈ ವಿದ್ಯುತ್ ದರ ಏರಿಕೆಯನ್ನು ಮಾಡಲಾಗಿದೆ ಎಂಬುದು ಸುಸ್ಪಷ್ಟ. ಹೀಗಿರುವಲ್ಲಿ ಜನತಾ ಸರ್ಕಾರವೂ ಸಹ ಕಾಂಗ್ರೆಸ್ ಸರ್ಕಾರದಂತೆಯೇ ವರ್ತಿಸಿದಲ್ಲಿ ಜನತಾ ಪಕ್ಷವನ್ನು ಆರಿಸಿದ್ದರಿಂದ ಪ್ರಯೋಜನ ಏನಾಯಿತು. ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಜುಲೈ 17ರಂದು ರಾಜ್ಯ ವ್ಯಾಪಿ ಪ್ರತಿಭಟನೆ

ಕಾಂಗ್ರೆಸ್ (ಐ) ಪಕ್ಷ ತನ್ನದೇ ಕೇಂದ್ರ ಸರ್ಕಾರದ ಒತ್ತಾಯದ ಫಲವಾಗಿ ಈ ದರ ಏರಿಕೆಯಾಗಿದೆ ಎಂಬುದನ್ನು, ಇಡೀ ದೇಶದಲ್ಲಿ ಕೇಂದ್ರ ಸರ್ಕಾರದ ಭ್ರಷ್ಟಾಚಾರ ದುರಾಡಳಿತದ ಬಗ್ಗೆ ಅತೃಪ್ತಿ ಮೂಡುತ್ತಿರುವುದನ್ನು ಮರೆಮಾಚಲು ರಾಜ್ಯ ಕಾಂಗ್ರೆಸ್ಸು ಪಕ್ಷ ಬೊಬ್ಬೆ ಹಾಕುತ್ತಿದೆ.

ಈ ಹಿನ್ನೆಲೆಯಲ್ಲಿ ಜನತಾ ಸರ್ಕಾರದ ಮೇಲೆ ಭಿನ್ನಾಭಿಪ್ರಾಯದ ಒತ್ತಡವನ್ನು ಹೇರಲು ಸಿ.ಪಿ.ಐ. (ಎಂ)

[8ನೇ ಪುಟ ನೋಡಿ]

ಪಂಜಾಬ್ ಹತ್ಯಾಕಾಂಡ

ಎಲ್ಲಿ, ಮಾನವ ರಕ್ತ ಪ್ರವಾಹದಲ್ಲಿ ಪಿಶಾಚಿ ಉಗ್ರವಾದಿಗಳು ಈಜಾಡುತ್ತಿದ್ದಾರೊ,
ಎಲ್ಲಿ ಮಾನವ ಕಳೇಬರಗಳು ನಮ್ಮ ಪ್ರಜಾಪ್ರಭುತ್ವವನ್ನು ಪರಿಹಾಸ ಮಾಡುತ್ತಿವೆಯೋ
ಎಲ್ಲಿ ಅಮಾಯಕ ಪ್ರಜೆಗಳ ಪ್ರಾಣಗಳು ನಾಯಿ ನರಿಗಳಿಗಿಂತ ಕಡೆಯಾಗಿ ಗಾಳಿಯಲ್ಲಿ ಬೆರೆತು ಹೋಗುತ್ತಿದ್ದಾವೋ.

ಅಲ್ಲಿ, ಆ ಪಂಜಾಬಿನಲ್ಲಿ,

ಭಾರತದ ಜನರೆಲ್ಲ ಭಯದಿಂದ ನಡುಗುವಂತ ಒಂದು ದಾರುಣ ಹತ್ಯಾಕಾಂಡ ಜರುಗಿದೆ. ಜುಲೈ ಆರರ ರಾತ್ರಿ ಜುರುಗಿದ ಈ ಉಗ್ರವಾದಿ ಮಾರಣಹೋಮದಲ್ಲಿ 40 ಮಂದಿ ಅಮಾಯಕರು ಪ್ರಾಣತೆತ್ತಿದ್ದಾರೆ.

(ಪ್ರಜಾಶಕ್ತಿಯಿಂದ)

ಪಿ. ಬಿ. ಖಂಡನೆ

ಪಂಜಾಬಿನಲ್ಲಿ ಜುಲೈ ಆರರಂದು ಉಗ್ರವಾದಿ ಕೊಲೆಗಾರರು 40 ಜನರನ್ನು ಕೊಂದ ಕಿರಾತ ಕೃತ್ಯದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ತನ್ನ ದಿಗ್ಭ್ರಾಂತಿಯನ್ನು ವ್ಯಕ್ತಪಡಿಸಿದೆ. ಈ ಹತ್ಯಾಕಾಂಡವನ್ನು ತೀವ್ರವಾಗಿ ಖಂಡಿಸಿದೆ.

ಈ ಪೈಶಾಚಿಕಕೃತ್ಯದ ಬಗ್ಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸುವಾಗಲೇ ಜನ ಸಮುದಾಯ ಪ್ರಕ್ಷುಬ್ಧಗೊಳ್ಳದೆ ಸಮುದಾಯಗಳ ನಡುವೆ ಸಾಮರಸ್ಯವನ್ನು ಕಾಯ್ದುಕೊಳ್ಳಬೇಕೆಂದು ಪಿ.ಬಿ. ಕಳಕಳಿಯ ಮನವಿ ಮಾಡಿದೆ. ಪಂಜಾಬಿನಲ್ಲಿ ಸಂಪೂರ್ಣವಾಗಿ ಸಾಮರಸ್ಯವನ್ನು ನಾಶಮಾಡುವುದಕ್ಕೆ ಎಷ್ಟು ದೂರ ಹೋಗಲು ಸಾಧ್ಯವೋ ಅಷ್ಟು ಕೂಡಾ ಮಾಡುತ್ತಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ಕಾಂಗ್ರೆಸ್ (ಐ) ಈ ಭೀಕರ ಪರಿಸ್ಥಿತಿಯ ಉದ್ದಗಲಗಳನ್ನು ಅರ್ಥಮಾಡಿಕೊಂಡಿಲ್ಲ. ಜನರನ್ನು ಸಂಘಟಿಸಲು ಪ್ರಯತ್ನಿಸದೆ ಕೇವಲ ಆಡಳಿತ ಕ್ರಮಗಳ ಮೇಲೆ ಅವಲಂಬಿಸಿರುವುದಲ್ಲದೆ ಜನರನ್ನು ಸಂಘಟಿಸಿ ಹೋರಾಟಕ್ಕೆ ತೊಡಗಿಸುತ್ತಿದ್ದ ಪಂಜಾಬಿನ ವಾತಾವರಣವನ್ನು ಅಲ್ಲೋಲಕಲ್ಲೋಲ ಮಾಡುತ್ತಾ ನಡೆದಿರುವ ಮತೀಯ, ಧಾರ್ಮಿಕ ವ್ಯತಿರೇಕಗಳ ವಿರುದ್ಧ, ದೇಶ ವಿಭಜಕ ಶಕ್ತಿಗಳ ವಿರುದ್ಧ ಹೋರಾಡಲು ದೇಶದ ಬಗ್ಗೆ ನಿಷ್ಠೆಯಿರುವ ಎಲ್ಲರೂ ಒಂದಾಗಿ ಸಂಘಟಿತ ಹೋರಾಟ ನಡೆಸಬೇಕೆಂದು ಸಿ.ಪಿ.ಐ. (ಎಂ) ವಿನಂತಿಸಿದೆ. ಉಗ್ರವಾದಿಗಳ ವಿಚ್ಛಿದ್ರಕಾರಿ ಕೃತ್ಯಗಳನ್ನು ವಿಫಲಗೊಳಿಸಬೇಕೆಂದು ಜನ ಸಮುದಾಯಕ್ಕೆ ಕರೆ ನೀಡಿದೆ.

"ದೇಶಾಭಿಮಾನಿಯಿಂದ"

ಸಂಗ್ಮಾ ಎಂಬ ಕಾರ್ಮಿಕ ಮಂತ್ರಿಯ ಕಾರ್ಮಿಕ ವಿರೋಧಿ ಉವಾಚಗಳು

– ಕಾ॥ ಸೂರ್ಯನಾರಾಯಣರಾವ್

"ಮಾಲೀಕರ ಸಂಘಗಳ ವೇದಿಕೆಯ ಮೇಲಿನಿಂದ ಕಾರ್ಮಿಕರ ಮೇಲೆ ಧಾಳಿ ಮಾಡುವುದನ್ನೇ ಒಂದು ಅಭ್ಯಾಸವಾಗಿ ಮಾಡಿಕೊಂಡಿರುವ ಸಂಗ್ಮಾರವರು ನಿಜಕ್ಕೂ ಕಾರ್ಮಿಕಮಂತ್ರಿಯಲ್ಲ ಆದರೆ ಕಾರ್ಮಿಕ ವಿರೋಧಿ ಮಂತ್ರಿ" ಎಂದು ಪ್ರತಿಕ್ರಿಯಿಸಿದರು ಕಾಂ॥ ಸೂರ್ಯ ನಾರಾಯಣರಾವ್ ರವರು ಸಿ.ಪಿ.ಐ–ಸಿ.ಪಿ.ಐ(ಎಂ) ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಪತ್ರಕರ್ತರು ಸಂಗ್ಮಾರವರು ಬೆಂಗಳೂರಿನಲ್ಲಿ ಕರ್ನಾಟಕ ವಾಣಿಜ್ಯ ಹಾಗೂ ಉದ್ದಿಮೆಗಳ ಫೆಡರೇಷನ ಸಭೆಯನ್ನು ಉದ್ದೇಶಿಸಿ ಹೇಳಿದ ಮಾತುಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು? ಎಂದು ಪ್ರಶ್ನಿಸಿದುದಕ್ಕೆ ಪ್ರತಿಕ್ರಿಯೆ ಇದು.

ಆ ಸಂಘಟಿತ ಕಾರ್ಮಿಕರ ನಾಯಕನಂತೆ ತೋರಿಸಿಕೊಳ್ಳುತ್ತಾ, ಅಸಂಘಟಿತ ಕಾರ್ಮಿಕರನ್ನು ಸಂಘಟಿತ ಕಾರ್ಮಿಕರ ವಿರುದ್ಧ ಎತ್ತಿಕಟ್ಟಲು ಹೊರಟಿರುವ ಈ ಕುತಂತ್ರವನ್ನು ಖಂಡಿಸಿದರು. ಅಸಂಘಟಿತ ಕಾರ್ಮಿಕರ ಒಂದೇ ಒಂದು ಸಮಸ್ಯೆಯನ್ನೂ ಬಗೆಹರಿಸದೆ ಕೃಷಿ ಕಾರ್ಮಿಕರ ಹಾಗೂ ಇತರ ಅಸಂಘಟಿತ ಕಾರ್ಮಿಕರ ಬಗ್ಗೆ ಮಾತನಾಡಿದರೆ ಅವರ ಚಾಂಪಿಯನ್ ಆಗುವುದು ಹೇಗೆ ಎಂದು ಪ್ರಶ್ನಿಸಿದರು.

ಸಾರ್ವಜನಿಕ ಉದ್ಯಮಗಳ ಮುಷ್ಕರ

ಸಾರ್ವಜನಿಕ ಉದ್ಯಮಗಳಲ್ಲಿ ಅಧಿಕಾರಿಗಳಿಗೆ ಶೇ.24ರಿಂದ 33ರವರೆಗೆ

[8ನೇ ಪುಟ ನೋಡಿ]

ಸಿ. ಐ. ಟಿ. ಯು. ರಾಜ್ಯ ಮಂಡಳಿ ಸಭೆ

ಸಿಐಟಿಯು ರಾಜ್ಯಕಾರ್ಯಕಾರಿ ಸಮಿತಿ ಹಾಗೂ ರಾಜ್ಯ ಮಂಡಳಿಸಭೆಯು ಜುಲೈ 28ರಿಂದ 30ರವರೆಗೆ ಮೈಸೂರಿನಲ್ಲಿ ನಡೆಯಲಿದೆ. ಸದಸ್ಯರು ತಪ್ಪದೆ ಬರಬೇಕೆಂದು ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ವಿನಂತಿಸಿದ್ದಾರೆ.

ಭಾರತದ ರೈಲ್ವೆಯ ವರ್ಗ ಲಕ್ಷಣ

ಇಂದು ಭಾರತದ ರೈಲ್ವೆ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದು. ಪ್ರಪಂಚದಲ್ಲಿಯೇ 4ನೇ ಸ್ಥಾನ ಪಡೆದಿದೆ. ಭಾರತದಲ್ಲಿ ಹಾಗೂ ಏಷ್ಯಾದಲ್ಲಿ ಮೊತ್ತ ಮೊದಲ ರೈಲ್ವೆ ಪ್ರಾರಂಭವಾದುದು 1853ರಲ್ಲಿ-ಮುಂಬಯಿಂದ ಥಾನಾದವರೆಗಿನ 34 ಕಿ.ಮೀ ದೂರದಷ್ಟು. ಲಾರ್ಡ್ ಡಾಲ್‌ಹೌಸಿ 1848ರಲ್ಲಿ ಭಾರತದ ಗವರ್ನರ್ ಜನರಲ್ ಆದಂದಿನಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳಿಗಾಗಿ ಭಾರತ ರೈಲ್ವೆ ಮಾರ್ಗ ರಚಿಸುವ ಕಾರ್ಯ ಪ್ರಾರಂಭವಾಯಿತು. ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಕಚ್ಚಾಸಾಮಗ್ರಿಗಳನ್ನು ದೇಶದ ವಿವಿಧೆಡೆಗಳಿಂದ ಮುಂಬಯಿ, ಮದ್ರಾಸ್, ಕಲ್ಕತ್ತಾ ಬಂದರುಗಳ ಮೂಲಕ ದೂರದ ಇಂಗ್ಲೆಂಡಿಗೆ ಸಾಗಿಸಲು ಮತ್ತು ಅಲ್ಲಿಂದಸಿದ್ಧ ವಸ್ತುಗಳನ್ನು ಈ ಬಂದರುಗಳ ಮೂಲಕ ದೇಶದ ನಾನಾ ಭಾಗಗಳಿಗೆ ಸಾಗಿಸಲು ಈ ಬಂದರುಗಳ ಹಿನ್ನಾಡು ಪ್ರದೇಶಗಳಲ್ಲಿ ರೈಲ್ವೆ ಮಾರ್ಗ ರಚಿಸುವುದು ಅಗತ್ಯವಾಗಿತ್ತು. ಮೊದಲ ಸ್ವಾತಂತ್ರ್ಯ ಸಂಗ್ರಾಮದ (1857)ನಂತರ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಭದ್ರಗೊಳಿಸಲು ದೇಶದ ಉದ್ದಗಲಕ್ಕೂ ಸೈನಿಕ ಸಂಚಾರಕ್ಕೆ ರೈಲ್ವೆ ಮಾರ್ಗದ ಅಭಿವೃದ್ಧಿಯು ಅಗತ್ಯವಿತ್ತು. ಮುಂದೆ ಮೊದಲನೇ ಜಾಗತಿಕ ಯುದ್ಧ(1914-18)ಮತ್ತು 2ನೇ ಜಾಗತಿಕ ಯುದ್ಧ (1939-45) ಕಾಲದಲ್ಲಿ ಬೃಹತ್ ಬ್ರಿಟಿಷ್ ಸಾಮ್ರಾಜ್ಯವನ್ನು ಜಗತ್ತಿನಾದ್ಯಂತ ರಕ್ಷಿಸಿಕೊಳ್ಳಲು ಭಾರತದ ನೆಲೆಯಲ್ಲಿ ರೈಲು ಮಾರ್ಗದ ವಿಸ್ತರಣೆ ಹಾಗೂ ಕೆಲವು ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿ ಅಗತ್ಯವೂ ಅನಿವಾರ್ಯವೂ ಆಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ರೈಲ್ವೆಯು ಮೂಲತಃ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳಿಗನುಗುಣವಾಗಿತ್ತು. ಆ ಮೂಲಕ ಕಾರ್ಲ್‌ಮಾರ್ಕ್ಸ್ ತಿಳಿಸಿದಂತೆ, ಭಾರತದ ಕೈಗಾರಿಕಾಕರಣಕ್ಕೂ ಭದ್ರ ತಳಹದಿಯಾಗಿತ್ತು.

ಸಾರ್ವಜನಿಕ ರಂಗದಲ್ಲಿ ರೈಲ್ವೆ :

ಬ್ರಿಟಿಷ್ ಖಾಸಗಿ ಕಂಪನಿಗಳ ಸ್ವಾಮ್ಯ ಹಾಗೂ ಆಡಳಿತದಲ್ಲಿಪ್ರಾರಂಭವಾದ ಭಾರತದ ರೈಲ್ವೆಯು ಭಾರೀ ನಷ್ಟವನ್ನನುಭವಿಸುತ್ತಲೇ ಇದ್ದುದರಿಂದ, 25ವರ್ಷಗಳ ನಂತರ-1878ರಲ್ಲಿ ಬ್ರಿಟಿಷ್ ಸರ್ಕಾರವೇ ಭಾರತದ ರೈಲ್ವೆಯ ಒಡೆತನವನ್ನು ವಹಿಸಿಕೊಂಡಿತು. ಮುಂದೆ, 1922ರಲ್ಲಿ ರೈಲ್ವೆಯ ಆಡಳಿತವನ್ನೂ ಸರ್ಕಾರವೇ ವಹಿಸಿಕೊಂಡಿತು. ಯುರೋಪ್, ಅಮೇರಿಕ, ಜಪಾನ್ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ಬೆಳೆದು ಸಾಮ್ರಾಜ್ಯಶಾಹಿ ರೂಪತಾಳಿ ಮೆರೆಯುತ್ತಿದ್ದ ಕಾಲದಲ್ಲಿ, ಭಾರತದಲ್ಲಿ ರೈಲ್ವೆ ಸಾರಿಗೆಯು ಬ್ರಿಟಿಷ್ ಖಾಸಗಿ ರಂಗದಲ್ಲಿ ನಷ್ಟ ಅನುಭವಿಸುತ್ತಿದ್ದು ಸಾರ್ವಜನಿಕ ರಂಗಕ್ಕೆ ಅದನ್ನು ಸೇರಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಗಮನಿಸಬೇಕು. ಭಾರತದ ರೈಲ್ವೆಯು ಬ್ರಿಟಿಷ್ ಖಾಸಗಿ ರಂಗದಲ್ಲಿ ಮೊದಲ 167 ವರ್ಷಗಳಲ್ಲಿ (1853-1922) ಸಾಧಿಸಲಾಗದಿದ್ದುದನ್ನು ಮುಂದಿನ 25 ವರ್ಷಗಳಲ್ಲಿ (1922-47) ಹತ್ತಾರು ಪಟ್ಟು ಹೆಚ್ಚು ಸಾಧಿಸಿರುವುದನ್ನು ಗಮನಿಸಬೇಕು. 1947ರಲ್ಲಿ ಭಾರತಕ್ಕೆ 54151 ಕಿ.ಮೀ ಉದ್ದದ ಮತ್ತು ಪಾಕಿಸ್ತಾನಕ್ಕೆ 11066 ಕಿ.ಮೀ. ಉದ್ದದ ರೈಲ್ವೆ ಬ್ರಿಟಿಷರಿಂದ ಬಳುವಳಿಯಾಗಿ ಬಂದಿತ್ತು. ಭಾರತದ ರೈಲ್ವೆಯಲ್ಲಿ ಸುಮಾರು 11000 ಕಿ.ಮೀ. ಅಷ್ಟು 500ಕ್ಕೂ ಹೆಚ್ಚು ರಾಜರ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿತ್ತು. 1950ರಷ್ಟರಲ್ಲಿ ದೇಶದ ಎಲ್ಲಾ ರೈಲ್ವೆ ದಾರಿಗಳನ್ನೂ ಸಾರ್ವಜನಿಕ ರಂಗಕ್ಕೇರಿಸಿ ಸರ್ಕಾರದ ಸ್ವಾಮ್ಯ ಹಾಗೂ ಆಡಳಿತಕ್ಕೆ ಒಳಪಡಿಸಲಾಯಿತು. ಅದಕ್ಕಾಗಿ ಪ್ರತ್ಯೇಕ ಆಡಳಿತ ಮಂಡಳಿ ಹಾಗೂ ಸಂಸತ್ತಿನಲ್ಲಿ ವರ್ಷ ವರ್ಷಕ್ಕೂ ಅದರ ಲೆಕ್ಕ ಪತ್ರಗಳನ್ನು ಒಪ್ಪಿಸಬೇಕಾದ ಪ್ರತ್ಯೇಕ ಮುಂಗಡ ಪತ್ರದ ವ್ಯವಸ್ಥೆಯನ್ನು ಹೊಸ ಸಂವಿಧಾನದಲ್ಲಿ ಜಾರಿಗೊಳಿಸಲಾಯಿತು.

ಸ್ವಾತಂತ್ರ್ಯನಂತರದ ರೈಲ್ವೆ ಬಂಡವಾಳಶಾಹಿ ದಾರಿಯಲ್ಲಿ :

ಸ್ವಾತಂತ್ರ್ಯೋತ್ತರದ ಭಾರತದದಲ್ಲಿ ರೈಲ್ವೆಯು ಸಾರ್ವಜನಿಕ ರಂಗದಲ್ಲಿದ್ದರೂ, ಅದರ ಅಭಿವೃದ್ಧಿಯು ದೇಶದ ಬಂಡವಾಳಶಾಹಿ ಮಾರ್ಗಕ್ಕನುಗುಣವಾಗಿಯೇ ಮುಂದುವರಿಯಿತು. ಹೊಸ ರೈಲು ಮಾರ್ಗಗಳ ಮೂಲಕ ದೇಶದ ಪ್ರಮುಖ ನಗರಗಳ ಹಾಗೂ ಬಂದರುಗಳ ಪರಸ್ಪರ ಸಂಪರ್ಕ ಹೆಚ್ಚಿಸಲು ವಿದ್ಯುತ್‌ಕರಣ ಮತ್ತು ಡಿಸೈಲ್‌ಕರಣಗಳ ಮೂಲಕ ರೈಲ್ವೆಗಾಡಿಗಳ ವೇಗ ಹೆಚ್ಚಿಸಲು, ಮೊದಲ ದರ್ಜೆಯ ಪ್ರಯಾಣಿಕರ ಸುಖ ಸೌಲಭ್ಯಗಳನ್ನು ಹೆಚ್ಚಿಸಲು ಆದ್ಯತೆ ನೀಡಲಾಯಿತು. ರೈಲ್ವೆ ವ್ಯವಸ್ಥೆಯು ಸುತ್ತಲೂ ಸಾವಿರಾರು ಲಾಭಕೋರ ಖಾಸಗಿ ಕಂಟ್ರಾಕ್ಟರುಗಳು ಹುಟ್ಟಿಕೊಂಡರು. ಲಕ್ಷಾಂತರ ಕಾರ್ಮಿಕರನ್ನು ಅವರು ಕಡಿಮೆ ವೇತನದಲ್ಲಿ ನೇಮಿಸಿಕೊಂಡು ರೈಲ್ವೆ ವ್ಯವಸ್ಥೆಯಿಂದ ಹೊರಗುಳಿಸಿದರು. ರೈಲ್ವೆ ಆಯ-ವ್ಯಯ ಸರಿದೂಗಿಸುವ ಮೂಲಕ, ಪ್ರಯಾಣಿಕರ ಹಾಗೂ ಸರಕು ಸಾಗಾಣಿಕೆಯ ದರಗಳನ್ನು ಕಾಲ ಕಾಲಕ್ಕೆ ವಿಪರೀತವಾಗಿ ಏರಿಸಿ ಜನ ಸಾಮಾನ್ಯರ ಮೇಲೆ ಭಾರೀ ಅಪ್ರತ್ಯಕ್ಷ ತೆರಿಗೆಯನ್ನು ಹೇರಲಾಯಿತು. ಪರಿಣಾಮವಾಗಿ, ಸಾರ್ವತ್ರಿಕ ಬೆಲೆ ಏರಿಕೆಗೆ, ಹಣದುಬ್ಬರಕ್ಕೆ ರೈಲ್ವೆ ಮುಂಗಡ ಪತ್ರಗಳೂ ಕಾರಣವಾದುವು. ರೈಲ್ವೆಯು ಗ್ರಾಮೀಣ ಪ್ರದೇಶಗಳ, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ

ನಮ್ಮ ದೇಶದಲ್ಲಿ ಏಕೆ, ಇಡೀಏಷ್ಯಾದಲ್ಲಿಯೇ ಅತ್ಯಂತ ಬೃಹತ್ ಉದ್ಯಮವಾದ ಭಾರತೀಯ ರೈಲ್ವೆ ಯಾವ ವರ್ಗದ ಸೇವೆ ಮಾಡುತ್ತಿದೆ. ಎಂಬ ಪ್ರಶ್ನೆಗೆ ಉತ್ತರ ನೀಡಿದ್ದಾರೆ ಕಾ. ಆರ್. ಚಂದ್ರ.

ಯನ್ನು ಅಲಕ್ಷಿಸಿ, ದೇಶದಲ್ಲಿ ಪ್ರಾದೇಶಿಕ ಅಸಮಾನತೆಗೂ ಸಾಕಷ್ಟು ಕಾರಣವಾಯಿತು. ರೈತರ, ಸಣ್ಣ ಮತ್ತು ಮಧ್ಯಮ ಕೈಗಾರಿಕೋದ್ಯಮಗಳ, ಮೂರನೇ ದರ್ಜೆಯ ಪ್ರಯಾಣಿಕರ, ಜೀವನಾವಶ್ಯಕ ವಸ್ತುಗಳ ಸಾಗಾಣಿಕೆಯವಿಷಯಗಳಲ್ಲಿ ಭಾರತದ ರೈಲ್ವೆಯು ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲ ಆಡಳಿತದಲ್ಲಿ ಭ್ರಷ್ಟಾಚಾರ, ಕೇಂದ್ರದಲ್ಲಿ ಆಳುವ ಪಕ್ಷದವರ [ಕಾಂಗ್ರೆಸ್] ರಾಜಕೀಯ ಹಸ್ತಕ್ಷೇಪ ಹೆಚ್ಚುತ್ತಿದೆ. ರೈಲ್ವೆ ಅಭಿವೃದ್ಧಿಯಲ್ಲಿ ಕಾಂಗ್ರೆಸೇತರ ರಾಜ್ಯಗಳಿಗೆ ತ್ರಿಪುರ, ಪ.ಬಂಗಾಳ, ಕರ್ನಾಟಕಕ್ಕೆ ಪಕ್ಷಪಾತ ತೋರಿಸಲಾಗುತ್ತಿದೆ.

ರೈಲ್ವೆ ಅಪಘಾತಗಳು, ಡಕಾಯಿತಿ, ಇತ್ಯಾದಿಗಳಿಂದ ರೈಲ್ವೆ ಪ್ರಯಾಣ ಮತ್ತು ಸರಕು ಸಾಗಾಣಿಕೆ ಅಪಾಯಕಾರಿಯಾಗುತ್ತಿವೆ. ರೈಲ್ವೆ ಕಾರ್ಮಿಕರ ವೇತನ ಸೌಲಭ್ಯಗಳು ಬಹಳ ಕೆಳಮಟ್ಟದಲ್ಲಿವೆ. ಅವರ ಶ್ರಮದ ಶೋಷಣೆ ಹೆಚ್ಚುತ್ತಲೇ ಇದೆ.

ಈ ವರ್ಷದಿಂದ 1987-88 ರಿಂದ ರೈಲ್ವೆ ಅಭಿವೃದ್ಧಿಗೆ ಶ್ರೀಮಂತ ವರ್ಗದವರಿಂದ ರೂ.1000, ರೂ.10,000, ರೂ.1,00,000, ರೂ.10,00,000 ಮುಖಬೆಲೆಯ ಆದಾಯ ಮತ್ತು ಸಂಪತ್ತು ತೆರಿಗೆ ವಿನಾಯಿತಿ ಪಡೆದ ಶೇ.10 ಬಡ್ಡಿದರದ ಬಾಂಡುಗಳ ಮಾರಾಟ ಮಾಡುವ ಮೂಲಕ ರೂ.250-300ಕೋಟಿ ಸಂಪನ್ಮೂಲ ಪಡೆಯುವ ಹೊಸ ಯೋಜನೆ ತರಲಾಗಿದೆ. ಶ್ರೀಮಂತರ ಹಾಗೂ ಕೈಗಾರಿಕೋದ್ಯಮ ಸಂಸ್ಥೆಗಳ ಆಸ್ತಿ ಮತ್ತು ಆದಾಯಗಳ ಮೇಲೆ ಏರಿಕೆಯ ದರದಲ್ಲಿ ಪ್ರತ್ಯಕ್ಷ ತೆರಿಗೆ ವಿಧಿಸಿ ದೇಶದ ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲ ಗಳಿಸುವ ಬದಲು, ಶ್ರೀಮಂತರಿಗೇ ಅಧಿಕ ಬಡ್ಡಿ ಕೊಟ್ಟು ರೈಲ್ವೆ ಅಭಿವೃದ್ಧಿಗೆ ಸಂಪನ್ಮೂಲ ಗಳಿಸುವ ಮೂಲಕ ರೈಲ್ವೆ ಆಡಳಿತ ವೆಚ್ಚ ಇನ್ನಷ್ಟು ಹೆಚ್ಚಲಿದೆ. ಅದನ್ನು ತೂಗಿಸಲು ಪ್ರಯಾಣ ಮತ್ತು ಸಾರಿಗೆ ದರಗಳು ಮುಂದಿನ ವರ್ಷಗಳಲ್ಲಿ ಮತ್ತಷ್ಟು ಏರಲಿವೆ!

1950-51ರಿಂದ 1982-83ರ ಅವಧಿಯ ರೈಲ್ವೆ ಅಭಿವೃದ್ಧಿಯ ಒಂದು ಪಕ್ಷಿನೋಟವನ್ನು ಇಲ್ಲಿ ಕೋಷ್ಟಕದ ರೂಪದಲ್ಲಿ ಕೊಡಲಾಗಿದೆ. ಅದರಲ್ಲಿನ ಅಂಕಿ ಅಂಶಗಳಿಂದ ಸ್ವತಂತ್ರ ಭಾರತದ ರೈಲ್ವೆ ಉದ್ಯಮದ ವರ್ಗ ಲಕ್ಷಣವನ್ನು ಸ್ಪಷ್ಟವಾಗಿ ತಿಳಿಯಬಹುದು. ಮುಖ್ಯವಾಗಿ :

ರೈಲುದಾರಿ

ಒಟ್ಟು ರೈಲುದಾರಿಯ ಉದ್ದ 1950-51ರಲ್ಲಿ 53,596ಕಿ.ಮೀ. ಆಗಿದ್ದುದು, 1982-83ರಲ್ಲಿ 61,385 ಕಿ.ಮೀ.ಗೇರಿತು. ಅಂದರೆ, ಈ ಅವಧಿಯಲ್ಲಿ ಒಟ್ಟು7,789ಕಿ.ಮೀ. ದೂರದ ಹೊಸ ರೈಲು ಮಾರ್ಗ ರಚಿಸಲಾಯಿತು 33 ವರ್ಷಗಳಲ್ಲಿ ಶೇ.15 ರಷ್ಟು ರೈಲು ಮಾರ್ಗ ಹೆಚ್ಚಾಯಿತು. ಹೊಸ ರೈಲು ಮಾರ್ಗದ ಶೇ.70ರಷ್ಟು ವಿದ್ಯುತೀಕರಿಸಿದುದಾಗಿದೆ. ಶೇ.30ರಷ್ಟು ವಿದ್ಯುತ್ ಕರಿಸದಿದ್ದುದಾಗಿದೆ. ಈ ಅವಧಿಯಲ್ಲಿ ವಿದ್ಯುತ್ ಕರಿಸಿದರೈಲು ಮಾರ್ಗ 388 ಕಿ.ಮೀ.ನಿಂದ 5815 ಕಿ.ಮೀ. ಅಷ್ಟು ಅಂದರೆ 14 ಪಾಲು ಹೆಚ್ಚಾಯಿತು ! ಆದರೆ ವಿದ್ಯುತ್‌ಕರಿಸಿದ ರೈಲುಮಾರ್ಗ 53.208ಕಿ.ಮೀ ದಿಂದ 55,570 ಕಿ.ಮೀ.ಅಷ್ಟೇ ಶೇ.4ರಷ್ಟೇ ಹೆಚ್ಚಾಯಿತು.

ರೈಲು ಯಂತ್ರ

1950-51ರಲ್ಲಿ ಒಟ್ಟು 8209 ರೈಲು ಯಂತ್ರಗಳಿದ್ದು 1982-83 ರಲ್ಲಿ ಒಟ್ಟು ಯಂತ್ರಗಳ ಸಂಖ್ಯೆಯು 10,087ಕ್ಕೇರಿತು. ಅಂದರೆ, ಶೇ.23 ರಷ್ಟು ರೈಲು ಯಂತ್ರಗಳ ಸಂಖ್ಯೆ ಹೆಚ್ಚಾಯಿತು. ಉಗಿಯಂತ್ರಗಳ ಸಂಖ್ಯೆಶೇ.23 ರಷ್ಟು ಕಡಿಮೆ ಆಯಿತು [8120ರಿಂದ6292]ಡಿಸೈಲ್ ಯಂತ್ರಗಳ ಸಂಖ್ಯೆ 17ರಿಂದ2638ಕ್ಕೂ ವಿದ್ಯುತ್ ಯಂತ್ರಗಳ ಸಂಖ್ಯೆ72ರಿಂದ 1157ಕ್ಕೂ ಏರಿತು. ಅಂದರೆ, ಅವುಗಳ ಸಂಖ್ಯೆ 154ಪಾಲು ಮತ್ತು15ಪಾಲು ಹೆಚ್ಚಾಯಿತು!

ರೈಲು ಪ್ರಯಾಣಿಕರ ಹಾಗೂ ಸಾರಿಗೆ ಗಾಡಿ

1950-51ರಲ್ಲಿ ಒಟ್ಟು ಪ್ರಯಾಣಿಕರ ಗಾಡಿಗಳ ಸಂಖ್ಯೆ 19,628 ಆಗಿದ್ದು. 1982-83ರಲ್ಲಿ 37,539 ಕ್ಕೇರಿತು. ಅಂದರೆ, ಶೇ. 90ರಷ್ಟು ಹೆಚ್ಚಾಯಿತು. ಇದೇ ಅವಧಿಯಲ್ಲಿ ಸಾರಿಗೆ ಗಾಡಿಗಳ ಸಂಖ್ಯೆ 2,05,596 ರಿಂದ 3,83,429ಕ್ಕೇರಿತು. ಅಂದರೆ ಶೇ.86 ರಷ್ಟು ಹೆಚ್ಚಾಯಿತು.

ರೈಲು ಪ್ರಯಾಣಿಕರು ಹಾಗೂ ಸರಕುಗಳ ಸಾಗಾಣಿಕೆ

1950-51 ರಲ್ಲಿ ಒಟ್ಟು ರೈಲು ಪ್ರಯಾಣಿಕರ ಸಂಖ್ಯೆ 12,840ಲಕ್ಷವಾಗಿದ್ದು 1982-83ರಲ್ಲಿ ಅವರ ಸಂಖ್ಯೆ 36,554 ಲಕ್ಷಕ್ಕೇರಿತು. ಶೇ. 185ರಷ್ಟು ಹೆಚ್ಚಾಯಿತು. ಈ ಅವಧಿಯಲ್ಲಿ ರೈಲು ಸರಕು ಸಾಗಾಣಿಕೆಯು 930ಲಕ್ಷ ಟನ್‌ಗಳಿಂದ 2,560 ಲಕ್ಷ ಟನ್‌ಗಳಿಗೇರಿತು. ಶೇ.175ರಷ್ಟು ಹೆಚ್ಚಾಯಿತು.

ರೈಲು ನೌಕರರ ಸಂಖ್ಯೆ

1951-51ರಲ್ಲಿ ರೈಲು ನೌಕರರ ಸಂಖ್ಯೆ[ಖಾಯಂ ಮತ್ತು ಹಂಗಾಮಿ] 9.10ಲಕ್ಷವಾಗಿದ್ದು1982-83ರಷ್ಟರಲ್ಲಿ ಅದರ ಸಂಖ್ಯೆ 17.90ಲಕ್ಷಕ್ಕೇರಿತು. [15.8ಲಕ್ಷ ಖಾಯಂ.2.1ಲಕ್ಷ ಹಂಗಾಮಿ] ಅಂದರೆ ಶೇ.97ರಷ್ಟು ಹೆಚ್ಚಾಯಿತು.

ಕಾರ್ಮಿಕರ ಶೋಷಣೆ

ಕಳೆದ33 ವರ್ಷಗಳಲ್ಲಿ ಒಟ್ಟು ರೈಲು ದಾರಿಯ ಉದ್ದ ಶೇ 15ರಷ್ಟು. ಒಟ್ಟು ರೈಲು ಯಂತ್ರಗಳ ಸಂಖ್ಯೆ ಶೇ.23 ರಷ್ಟು ಪ್ರಯಾಣಿಕರ ಗಾಡಿಗಳು ಶೇ.

[6ನೇ ಪುಟ ನೋಡಿ]

ರೈಲು ಅಭಿವೃದ್ಧಿಯ ಪಕ್ಷಿ ನೋಟ

ವಿವರಗಳು	1950-51	1982-83	ಶೇಕಡಾ ಹೆಚ್ಚುವರಿ
1. ರೈಲು ದಾರಿಯ ಉದ್ದ (ಕಿ.ಮೀ.)	53,596	61,385	15%
ವಿದ್ಯುತ್‌ಕರಿಸಿದ (ಕಿ.ಮೀ.)	388	5,815	1,400% (14ಪಾಲು)
ವಿದ್ಯುತ್ ಕರಿಸದ (ಕಿ.ಮೀ.)	53,208	55,570	4%
2. ರೈಲು ಯಂತ್ರಗಳು :	8,209	10,087	23%
ಉಗಿ ಯಂತ್ರಗಳು :	8,120	6,292	23%
ಡಿಸೈಲ್ ಯಂತ್ರಗಳು :	17	2,638	15,420% [154 ಪಾಲು]
ವಿದ್ಯುತ್ ಯಂತ್ರಗಳು :	72	1,157	1,510% (15 ಪಾಲು)
3. ರೈಲು ಪ್ರಯಾಣಿಕರ ಗಾಡಿಗಳು	19,628	37,539	90./.
4. ಸರಕು ಸಾಗಾಣಿಕೆಯ ಗಾಡಿಗಳು	2,05,596	3,83,429	86./.
5. ರೈಲು ನೌಕರರ ಸಂಖ್ಯೆ	9,10,000	17,90,000	97 /
6. ರೈಲು ಪ್ರಯಾಣಿಕರ ಸಂಖ್ಯೆ [ಲಕ್ಷ]	12,840	36,554	185./.
7. ರೈಲು ಸರಕು ಸಾಗಾಣಿಕೆ (ಲಕ್ಷ ಟನ್)	930	2,560	175./.

(ಆಧಾರ : ಮನೋರಮಾ ವಾರ್ಷಿಕ : 1986)

ದಕ್ಷಿಣ ಕೊರಿಯಾ : ಪ್ರಜಾಪ್ರಭುತ್ವಕ್ಕಾಗಿ ಹೋರಾಟ

ಕಳೆದ ಜನವರಿ ತಿಂಗಳಲ್ಲಿ ಒಬ್ಬ ವಿದ್ಯಾರ್ಥಿ ಪೋಲೀಸ್ ಕಸ್ಟಡಿಯಲ್ಲಿ ಸಾವನ್ನಪ್ಪಿದ ಬಳಿಕ ದ.ಕೊರಿಯಾದಲ್ಲಿ ಪೋಲೀಸರು ಮತ್ತು ಜನತೆಯ ನಡುವೆ ಭಾರಿ ಘರ್ಷಣೆಗಳು ನಡೆಯುತ್ತಿವೆ. ದ.ಕೊರಿಯಾದ ಸರ್ವಾಧಿಕಾರಿ ಆಡಳಿತೆಯ ವಿರುದ್ಧ ಪ್ರತಿಭಟನಾ ಪ್ರದರ್ಶನಗಳ ಮಹಾಪೂರವೇ ಹರಿಯುತ್ತಿದೆ. ಇತ್ತೀಚೆಗೆ ನಾಲ್ಕಾರು ವಾರಗಳಲ್ಲಂತೂ ಈ ಪ್ರತಿಭಟನೆ ಪೋಲೀಸರು ಮತ್ತು ವಿದ್ಯಾರ್ಥಿ ಪ್ರತಿಭಟನಾಕಾರರ ನಡುವೆ ಭೀಕರ ಕಾಳಗದ ಸ್ವರೂಪ ತಳೆದು ಪೋಲೀಸು ಠಾಣೆಗಳ ಧಾಳಿಯೂ ನಡೆಯುತ್ತಿದೆ. ಮೊನ್ನೆ ಮೇ 17ರಂದು ಕ್ವಾಂಗ್ಜು ನಗರದ ಪ್ರತಿಭಟನೆಯ ಏಳನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಪ್ರಾರಂಭವಾದ ಮತ ಪ್ರದರ್ಶನಗಳು ಈಗಲೂ ಅವ್ಯಾಹತವಾಗಿ ನಡೆಯುತ್ತಿವೆ.

ಕ್ವಾಂಗ್ಜು ಬಂಡಾಯದ ಏಳನೇ ವರ್ಷಾಚರಣೆ ನಡೆಯುವುದಕ್ಕೆ ಒಂದು ತಿಂಗಳು ಮೊದಲೇ ಸರ್ವಾಧಿಕಾರಿ ಚುನ್ ಐವತ್ತೆರಡು ವಿಶ್ವವಿದ್ಯಾನಿಲಯಗಳಿಗೆ ತನ್ನ ಫ್ಯಾಸಿಸ್ಟ್ ಪಡೆಗಳನ್ನು ಕಳುಹಿಸಿ ವಿದ್ಯಾರ್ಥಿಗಳು ಪ್ರಕಟಿಸಿದ ಕರ ಪತ್ರಗಳನ್ನು ಸ್ವಾಧೀನ ಪಡಿಸಿಕೊಂಡಿದ್ದ ನಾಲ್ಕು ಸಾವಿರಕ್ಕೂ ಮಿಕ್ಕಿದ ಜನಗಳನ್ನು ಅವರ ಮನೆಯಿಂದಲೇ ದಸ್ತಗಿರಿ ಮಾಡಿಸಿ ಬಂಧನದಲ್ಲಿಟ್ಟದ್ದ. ರಸ್ತೆಯಲ್ಲಿ ನಡೆದಾಡುತ್ತಿರುವರನ್ನೂ ಕಛೇರಿಗಳಲ್ಲಿ ದುಡಿಯುವವರನ್ನೂ ಸಹ ಚುನ್‌ನ ಫ್ಯಾಸಿಸ್ಟ್ ಪಡೆಗಳು ಬಂಧಿಸದೆ ಬಿಡಲಿಲ್ಲ. ಹೀಗಿದ್ದರೂ ಕ್ವಾಂಗ್ಜು ಹೋರಾಟದ ಏಳನೇ ವರ್ಷಾಚರಣೆಯ ದಿನದಂದು ಬೃಹತ್ ಪ್ರದರ್ಶನಗಳು ನಡೆದೇ ಬಿಟ್ಟವು.

ದ.ಕೊರಿಯದ ಸಂವಿಧಾನದ ಪ್ರಕಾರ ಸರ್ವಾಧಿಕಾರಿ ಚುನ್ ಮತ್ತೊಮ್ಮೆ ಅಧ್ಯಕ್ಷನಾಗುವಂತಿಲ್ಲ. ಹಾಗಾಗಿ ತನ್ನ ಸ್ಥಿತಿಯನ್ನು ಸುಭದ್ರಗೊಳಿಸಲು ಚುನ್ ಇನ್ನೊಂದು ಹೂಟ ಹೂಡಿದ. ಚುನ್‌ನ ಆಡಳಿತ ಪಕ್ಷವಾದ ಡೆಮಾಕ್ರಟಿಕ್ ಜಸ್ಟಿಸ್ ಪಾರ್ಟಿಯ 8,000 ಮಂದಿ ಸದಸ್ಯರು ಒಂದು ಸ್ಟೇಡಿಯಂನಲ್ಲಿ ಸಭೆ ಸೇರಿ ಚುನ್‌ನ ಉತ್ತರಾಧಿಕಾರಿಯನ್ನು ಆಯ್ಕೆಮಾಡುವ ನಾಟಕ ನಡೆಸಿದರು. 1980ರಲ್ಲಿ ತನ್ನ ಸರ್ವಾಧಿಕಾರ ಸ್ಥಾಪಿಸಿಕೊಳ್ಳಲು ಮತ್ತು ಕ್ವಾಂಗ್ಜು ಬಂಡಾಯವನ್ನು ಹತ್ತಿಕ್ಕಲು ಚುನ್‌ಗೆ ಹಸ್ತಕನಾಗಿದ್ದ ರೋಹ್ ಟೇ ವೂ ಎಂಬ ನಿವೃತ್ತ ಜನರಲ್‌ರನ್ನು ಚುನ್‌ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಲಾಯಿತು. ಮತದಾನ ಮಾಡಿದ 7,309 ಜನರಲ್ಲಿ ಕೇವಲ 39 ಜನರನ್ನು ಬಿಟ್ಟರೆ ಉಳಿದೆಲ್ಲ ಮತಗಳೂ ರೋಹ್ ಟೇ ವೂಗೇ ಬಿದ್ದಿತ್ತು. ತುಂಬಾ ಮುಂಜಾಗ್ರತೆವಹಿಸಿ ತನಗಿಷ್ಟಬಂದಂತೆ ಆರಿಸಿಕೊಂಡಿರುವ ಐದು ಸಾವಿರ ಮಂದಿ ಪ್ರತಿನಿಧಿಗಳು ಈ ವರ್ಷ ಡಿಸಂಬರ್ ತಿಂಗಳಲ್ಲಿ ರೋಹ್ ಟೇ ವೂನನ್ನು ಅಧ್ಯಕ್ಷನನ್ನಾಗಿ ಆರಿಸುವಂತೆ ಚುನ್ ಎಲ್ಲ ವ್ಯವಸ್ಥೆ ಮಾಡಿದ್ದಾನೆ. ರೋಹ್ ಅಧಿಕಾರಕ್ಕೆ ಬಂದ ಮೇಲೂ ಚುನ್ ಅವನ ಮೇಲೆ ತನ್ನ ಪ್ರಭಾವ ಉಳಿಸಿಕೊಳ್ಳಲಿದ್ದಾನೆ. ಮಾತ್ರವಲ್ಲ ದ.ಕೊರಿಯದ ಫ್ಯಾಸಿಸ್ಟ್ ವ್ಯವಸ್ಥೆಯ ಮೇಲೆ ಸಾಕಷ್ಟು ನಿಯಂತ್ರಣ ಹೊಂದಿರುತ್ತಾನೆ.

ದ.ಕೊರಿಯದ ಜನ ಈ ಕಪಟ ನಾಟಕವನ್ನು ಧಿಕ್ಕರಿಸಿದ್ದಾರೆ. ವಯಸ್ಕ ಮತದಾನದ ನೆಲೆಯಲ್ಲಿ ಅಧಿಕಾರದ ಹಸ್ತಾಂತರವಾಗಬೇಕೇ ಹೊರತು ಇಂತಹ ಕಪಟ ವಿಧಾನದಿಂದ ಅಲ್ಲ ಎನ್ನುವುದನ್ನು ಅವರು ಸಾರಿ ಹೇಳಿದ್ದಾರೆ. ಆದರೆ ಈ ಬೇಡಿಕೆ ಮುಂದೊಡ್ಡುತ್ತಿರುವವರನ್ನು ದೇಶದ್ರೋಹಿಗಳೆಂದೂ ಕಮ್ಯುನಿಸ್ಟ್‌ಪರರೆಂದೂ ಕರೆಯಲಾಗುತ್ತಿದೆ. ಅಮೇರಿಕದ ಗುಲಾಮನಾಗಿರುವ ದ.ಕೊರಿಯ ಸರ್ಕಾರ ಇಂತಹ ಪ್ರಜಾಪ್ರಭುತ್ವವಾದಿಗಳಿಗೆ ಮರಣ ದಂಡನೆಶಿಕ್ಷೆಯನ್ನೂ ವಿಧಿಸಲಿಚ್ಛೆಯಂತೆ! ಚುನ್‌ನ ಉತ್ತರಾಧಿಕಾರಿಯಾಗಿ ರೋಹ್‌ನನ್ನು ಆರಿಸಿ ಅವನನ್ನು ಮುಂದಿನ ವರ್ಷ ಫೆಬ್ರವರಿಯಲ್ಲಿ ಅಧ್ಯಕ್ಷ ಸ್ಥಾನಕ್ಕೇರಿಸುವುದರ ಉದ್ದೇಶ 1988 ರ ಒಲಂಪಿಕ್ ಪಂದ್ಯಗಳ ಹೊತ್ತಿಗೆ ದ.ಕೊರಿಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ ಎನ್ನುವುದನ್ನು ಜಗತ್ತಿಗೆ ತೋರ್ಪಡಿಸುವುದಕ್ಕಾಗಿ ಅಷ್ಟೆ.

ಜನ ಹೋರಾಡುತ್ತಿದ್ದಾರೆ

ಈ ಎಲ್ಲಾ ಕಪಟ–ಕುಯುಕ್ತಿಗಳ ವಿರುದ್ಧ ಕೊರಿಯದ ಜನತೆ ಸೆಣಸಾಡುತ್ತಿದ್ದಾರೆ. ವಿದ್ಯಾರ್ಥಿಗಳ ಹೋರಾಟವನ್ನು ಹತ್ತಿಕ್ಕಲು ಚುನ್ ಜೂನ್ 9 ರಂದು 2000 ಜನರನ್ನು ಬಂಧಿಸಿದ. ಇದರವಿರುದ್ಧ ನಲವತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಕ್ಷಣ ಪ್ರತಿಭಟನೆ ನಡೆಸಿದರು. ತಿಕ್ಕಾಟದಲ್ಲಿ ವಿದ್ಯಾರ್ಥಿಗಳು ಪೋಲೀಸರ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನೆಸೆದರು. ಒಂದು ಸಾವಿರ ವಿದ್ಯಾರ್ಥಿಗಳನ್ನು ಸರ್ವಾಧಿಕಾರಿ ನ್ಯಾಯಾಲಕ್ಕೆ ಒಯ್ದು ಅವರನ್ನೆಲ್ಲ ಸರಕಾರ ವಿರೋಧಿ ಚಟುವಟಿಕೆಗಳ ಹೆಸರಲ್ಲಿ 29 ದಿನ ಬಂಧನಕ್ಕೊಳಪಡಿಸಲಾಯಿತು. ಮರುದಿನ ಅಂದರೆ ಜೂನ್ 10ರಂದು ಮತ್ತೆ ರಸ್ತೆಗಿಳಿದು ಪೋಲೀಸರೊಡನೆ ಖಾಡಾಖಾಡಿ ಹೋರಾಟ ನಡೆಸಿದರು ಎಷ್ಟೋ ಸಲ ಪೋಲೀಸರೇ ಹಿಮ್ಮೆಟ್ಟಬೇಕಾಯಿತು. ಪೋಲೀಸರ ಬಳಿಯಿದ್ದ ಅಶ್ರುವಾಯು ಸಂಗ್ರಹ ಖಾಲಿಯಾಗಿ ಅವರು ಮತ್ತೆ ಮತ್ತೆ ಅದನ್ನು ತರಿಸಿಕೊಳ್ಳಬೇಕಾಯಿತು. ನಾಲ್ಕು ಸಾವಿರ ಜನರನ್ನು ಬಂಧಿಸಲಾಯಿತು.

ದ.ಕೊರಿಯದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುತ್ತಿರುವ ಎಲ್ಲ ವಿರೋಧ ಪಕ್ಷಗಳು ಈ ಪ್ರತಿಭಟನಾ ಪ್ರದರ್ಶನಗಳು ತಮ್ಮ ವಿಜಯದ ಸಂಕೇತವೆಂದು ಘೋಷಿಸಿವೆ. ○

ಗೇಣಿ ಒಕ್ಕಲಿಗೆ ಕೊನೆಗಂತೂ ನ್ಯಾಯ ಸಿಕ್ಕಿತು

ಬಂಟ್ವಾಳ ಜೂನ್ 28 : ಬಂಟ್ವಾಳ ತಾಲೂಕಿನ ಬರಿಮಾರ್ ಗ್ರಾಮದ ಪಾರ್ಪಜೆ ಸೇಸಪ್ಪಗೌಡರು ಅವರ ಹಿರಿಯರ ಕಾಲದಿಂದ(ಅಂದರೆ ಒಂದು ಶತಮಾನದ ಮೊದಲಿಂದ) ಸುಮಾರು 9 ಎಕ್ರೆ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದವರು. ಭೂಮಾಲಕರು ಒಬ್ಬರಿಂದೊಬ್ಬ ಭೂಮಿಯನ್ನು ಪರಾಧೀನ ಮಾಡಿಕೊಂಡು ಬಂದರೂ, ಒಕ್ಕಲು ಪಾರ್ಪಜೆ ಭೂಮಿಯಲ್ಲಿ ಶ್ರೀಗೌಡ ಕುಟುಂಬವೇ.

ಒಕ್ಕಲು ಸೇಸಪ್ಪಗೌಡರು 1980 ರಲ್ಲಿ ಕಾಂಗ್ರೆಸ್ ಸದಸ್ಯರೇ ತುಂಬಿದ್ದ ಭೂನ್ಯಾಯ ಮಂಡಳಿಯಿಂದ ನ್ಯಾಯ ಪಡೆಯುವಲ್ಲಿ ವಂಚಿತವಾಗಿ, ಹೈಕೋರ್ಟಿನಿಂದ ಭೂಮಾಲಕರು ವಕ್ಕಲಿನ ಸ್ವಾಧೀನದ ಭೂಮಿಗೆ ಪ್ರವೇಶ ಮಾಡದಂತೆ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾದರು. ಪ್ರಕರಣವನ್ನು ಪರಿಶೀಲಿಸಿದ ಹೈಕೋರ್ಟ್ ಮರು ತನಿಖೆಗೆ ಬಂಟ್ವಾಳ ಭೂನ್ಯಾಯ ಮಂಡಳಿಗೆ 1985ರಲ್ಲಿ ಕಳುಹಿಸಿತು. ಬಂಟ್ವಾಳ ಭೂನ್ಯಾಯ ಮಂಡಳಿ ಪ್ರಕರಣವನ್ನು ತನಿಖೆಗೆ ಎತ್ತಿಕೊಂಡಾಗ ಸದ್ರಿ ಭೂಮಾಲಿಕರು ತಮ್ಮಗೂಂಡಾಗಳೊಂದಿಗೆ ಪೋಲೀಸರ ನೆರವು ಪಡೆದು ವಕ್ಕಲಿನ ಸ್ವಾಧೀನ ಇರುವ ಭೂಮಿಯನ್ನು ಕಬಳಿಸಲು ಭಯೋತ್ಪಾದಕ ದೌರ್ಜನ್ಯ ನಡೆಸಿ ಶ್ರೀ ಸೇಸಪ್ಪಗೌಡರೂ ಸೇರಿ ಕುಟುಂಬದ 4 ಜನ ತೀವ್ರ ರೀತಿಯಲ್ಲಿ ಗಾಯಗೊಂಡು ಸರಕಾರಿ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಸೇರಿಸಲ್ಪಟ್ಟರು. ಈ ಮಧ್ಯೆ ಭೂಮಾಲಕರು ಸುಪ್ರಿಂ ಕೋರ್ಟಿಗೆ ಹೋಗಿ ಪ್ರಕರಣವನ್ನು ಭೂ ನ್ಯಾಯ ಮಂಡಳಿ ತನಿಖೆ ಮಾಡದಂತೆ ಅರ್ಜಿ ಸಲ್ಲಿಸಿ ಸೋತರು. ಪುನಃ ಬಂಟ್ವಾಳ ಭೂ ನ್ಯಾಯ ಮಂಡಳಿಗೆ ತನಿಖೆಗಾಗಿ ಈ ಪ್ರಕರಣ ಬಂತು. ಈ ಬಗ್ಗೆ ಬಂಟ್ವಾಳ ತಾಲೂಕು ಪ್ರಾಂತ ರೈತ ಸಂಘ ಭೂನ್ಯಾಯ ಮಂಡಳಿ ಮುಂದೆ ಒಕ್ಕಲು ಸೇಸಪ್ಪಗೌಡರಿಗೆ ರಕ್ಷಣೆ ಕೊಡಬೇಕು ಹಾಗೂ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿ ಸತ್ಯಾಗ್ರಹವನ್ನು ಸಂಘಟಿಸಿತ್ತು. ಇದರಿಂದಾಗಿ ಭೂ ಮಾ ಲ ಕ ರ ನಿತ್ಯ ದೌರ್ಜನ್ಯ, ಕಿರುಕುಳ ಕಡಿಮೆಯಾಗಿರುವುದು ಗಮನಾರ್ಹವಾಗಿದೆ.

24-6-87 ರಂದು ಸೇರಿದ ಬಂಟ್ವಾಳ ಭೂನ್ಯಾಯ ಮಂಡಳಿಯು ಶ್ರೀ ಸೇಸಪ್ಪ ಗೌಡರು ಗೇಣಿದಾರನಾಗಿದ್ದು ಅಧಿಭೋಗದಾರ ಹಕ್ಕುದಾರನೆಂದು ಬಹಿರಂಗವಾಗಿ ಘೋಷಣೆ ಮಾಡಲಾಯಿತು. ಗೇಣಿದಾರ ಸೇಸಪ್ಪ ಗೌಡರಿಗೆ ಕೊನೆಗಂತೂ ಭೂನ್ಯಾಯ ಮಂಡಳಿಯಲ್ಲಿ ನ್ಯಾಯ ದೊರಕಿದೆ. ●

ರಾಜ್ಯಾದ್ಯಂತ ಹೋರಾಟಕ್ಕೆ ಎಸ್. ಎಫ್. ಐ. ಕರೆ

ರಾಜ್ಯದಲ್ಲಿ ಸರ್ಕಾರಿ ಜೂನಿಯರ್ ಕಾಲೇಜ್‌ಗಳನ್ನು ಮುಚ್ಚುವ ಹಾಗೂ 18 ಸರ್ಕಾರಿ ಪ್ರಶಿಕ್ಷಣ ಸಂಸ್ಥೆ (ಟಿ.ಟಿ.ಐ.)ಗಳಿಗೆ 1987-88ನೇ ಶೈಕ್ಷಣಿಕ ವರ್ಷದ ಸಾಲಿಗೆ ಪ್ರವೇಶ ತಡೆಹಿಡಿಯುವ ಸರ್ಕಾರದ ಕ್ರಮವನ್ನು ಖಂಡಿಸಿ 18-7-1987ರಂದು ರಾಜ್ಯದಾದ್ಯಂತ ಪ್ರತಿಭಟನಾ ಕಾರ್ಯಕ್ರಮ ನಿರ್ಧರಿಸಲಾಗಿದೆ. ರಾಜ್ಯ ಮಟ್ಟದ ಪ್ರಮುಖ 25 ಶೈಕ್ಷಣಿಕ ಬೇಡಿಕೆಗಳನ್ನು ಒತ್ತಾಯ ಪಡಿಸಿ ರಾಜ್ಯದಾದ್ಯಂತ ವಿವಿಧ ಹಂತಗಳ ಹೋರಾಟಗಳನ್ನು ರೂಪಿಸಲಾಗುವುದು. ಮೊದಲ ಹಂತವಾಗಿ ಆಗಸ್ಟ 8 ರಂದು ರಾಜ್ಯದಾದ್ಯಂತ ಬೇಡಿಕೆ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ರಾಜ್ಯ ಮಟ್ಟದ ಬೃಹತ್ ವಿದ್ಯಾರ್ಥಿ ಪ್ರದರ್ಶನವನ್ನು 2ನೇ ಹಂತವಾಗಿ ರೂಪಿಸಲಾಗುವುದು. ಕೇಂದ್ರ ಸರ್ಕಾರದ ಜನ ವಿರೋಧಿ 'ಹೊಸ ಶಿಕ್ಷಣ ನೀತಿ' ಹಾಗೂ ನಿರುದ್ಯೋಗದ ವಿರುದ್ಧ ಸೆಪ್ಟಂಬರ್ 23 ರಂದು ನವದೆಹಲಿಯಲ್ಲಿ ನಡೆಯುವ ವಿದ್ಯಾರ್ಥಿ–ಯುವ ಜನರ ರಾಷ್ಟ್ರ ಮಟ್ಟದ ಪ್ರದರ್ಶನದಲ್ಲಿ ರಾಜ್ಯದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಕರೆ ಕೊಡಲಾಗಿದೆ.

ಆಗಸ್ಟ 9 ರಂದು ಹಿರೋಶಿಮಾ ದಿನ, ಆಗಸ್ಟ 26ರಂದು ನಮೀಬಿಯಾ ದಿನ ಆಚರಿಸಲು ನಿರ್ಧರಿಸಲಾಗಿದೆ.

ಜುಲೈ 17ರಂದು ರಾಜ್ಯದಾದ್ಯಂತ ವಿದ್ಯುತ್, ಹೋಟೆಲ್ ಹಾಗೂ ಹಾಲಿನ ಬೆಲೆ ಏರಿಕೆ ವಿರೋಧಿಸಿ ಸಿ.ಪಿ.ಐ.(ಎಂ) ಸಿ.ಪಿ.ಐ. ಪಕ್ಷಗಳು ನಡೆಸಲಿರುವ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಹಾಗೂ ನಂತರದ ರಾಜ್ಯ ಬಂದ್ ಕರೆಗೆ ರಾಜ್ಯ ಸಮಿತಿ ಪೂರ್ಣ ಬೆಂಬಲ ನೀಡಿ ಸಹಕರಿಸಲು ನಿರ್ಧರಿಸಿದೆ.

ಉಪ ಕುಲಪತಿಗೆ ಮನವಿ

ಜುಲೈ 7ರಂದು ಎಸ್. ಎಫ್. ಐ. ರಾಜ್ಯಸಮಿತಿ ನಿಯೋಗವೊಂದು ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿ ಡಾ|| ಡಿ.ಎಂ. ನಂಜುಂಡಪ್ಪರವರನ್ನು ಭೇಟಿ ಮಾಡಿ ವಿಶ್ವವಿದ್ಯಾಲಯದ ಕೆಲವು ಸಮಸ್ಯೆಗಳ ಬಗ್ಗೆ ಚರ್ಚಿಸಿ 'ಸ್ವಾಯತ್ತ' ಕಾಲೇಜುಗಳಿಗೆ ಅನುಮೊದನೆ ನೀಡದಿರಲು, ಸೆನೆಟ್ ವಿದ್ಯಾರ್ಥಿ ಕೌನ್ಸಿಲ್ ಹಾಗೂ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ಒತ್ತಾಯಿಸಿದೆ.

ಎಸ್. ಎಫ್. ಐ. ಹಾಗೂ ಇತರ ವಿದ್ಯಾರ್ಥಿ ಸಂಘಟನೆಗಳು ಡೊನೇಶನ್ ಕ್ಯಾಪಿಟೇಶನ್ ವಿರುದ್ಧ ರೂಪಿಸುತ್ತಿರುವ ಐಕ್ಯ ಚಳುವಳಿಯನ್ನು ಯಶಸ್ವಿಗೊಳಿಸಲು ಕರೆ ನೀಡಲಾಗಿದೆ. ○

ಎಸ್.ಎಫ್.ಐ. ರಾಜ್ಯ ಮಟ್ಟದ ಶಿಬಿರಕ್ಕೆ ಸೂಚನೆ

ಜುಲೈ 22ರಿಂದ 27ರವರೆಗೆ ಹಂಪೆಯಲ್ಲಿ ನಡೆಯಲಿರುವ ಎಸ್.ಎಫ್.ಐ. ಶಿಬಿರ 22ರಂದು ಬೆಳಗ್ಗೆ 9-30ಕ್ಕೆ ಆರಂಭವಾಗಲಿದೆ. 21ರಂದು ಮಧ್ಯಾಹ್ನದಿಂದ 22ರ ಮುಂಜಾನೆವರೆಗೆ ಹೊಸಪೇಟೆ ಬಸ್ ನಿಲ್ದಾಣ ಹಾಗೂ ರೈಲ್ವೆನಿಲ್ದಾಣಗಳಲ್ಲಿ ಎಸ್.ಎಫ್.ಐ. ಸ್ವಯಂ ಸೇವಕರು ಸ್ವಾಗತಕ್ಕೆ ಇರಲಿದ್ದಾರೆ. ಪ್ರತಿನಿಧಿ ಶುಲ್ಕ ರೂ. 25/- ಎಂದು ನಿಗದಿಗೊಳಿಸಲಾಗಿದೆ.

ರಾಯಚೂರು : ಮಹಿಳಾ ಅಧ್ಯಯನ ಶಿಬಿರ

ದಿ. 20 ಮತ್ತು 21ರಂದು ಜೂನ್ ಶನಿವಾರ ಮತ್ತು ಭಾನುವಾರದಂದು ರಾಯಚೂರಿನಲ್ಲಿ ಜಿಲ್ಲಾ ಮಟ್ಟದ ಮಹಿಳಾ ಅಧ್ಯಯನ ಶಿಬಿರವನ್ನು ನಡೆಸಲಾಯಿತು. ಹದಿನೆಂಟು ಮಹಿಳೆಯರು ಹಾಜರಿದ್ದರು.

ಕಾ|| ಹರಿಣಿ ಕಕ್ಕೇರಿಯವರು, ಮಹಿಳಾ ಸಂಘಟನೆಯ ಕಾರ್ಯಕ್ರಮವನ್ನು ಸಂಘಟನೆ ಮತ್ತು ಸಂವಿಧಾನಗಳ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಇಡೀ ಮಹಿಳಾ ವಿಭಾಗವನ್ನೇ ಸಂಘಟಿಸಿ ಹೋರಾಡುವ ಹಿನ್ನೆಲೆಯಲ್ಲಿ ಒಂದು ಬಲಿಷ್ಠ ಸಂಘಟನೆಯ ಅವಶ್ಯಕತೆ ಇದೆ ಎಂದು ತಿಳಿಸಿದರು.

ಮರುದಿನ ಮತ್ತೆ ಕಾ|| ಹರಿಣಿ ಕಕ್ಕೇರಿಯವರು ಮಹಿಳೆಯ ಶೋಷಣೆಯ ಮೂಲ ಕಾರಣಗಳು" ಬಗ್ಗೆ ಉಪನ್ಯಾಸ ನೀಡಿದರು.

"ಪುರುಷ ದ್ವೇಷೀ ಸ್ತ್ರೀಯರು ಮತ್ತು ಮಹಿಳಾ ಚಳುವಳಿ"ಯ ಕುರಿತು ಕಾ|| ಗಂಗಾಧರ ಕುಷ್ಟಗಿಯವರು ಮಾತನಾಡುತ್ತಾ ಯುರೋಪಿನ ದೇಶಗಳಲ್ಲಿ ಪ್ರಥಮವಾಗಿ ಪ್ರಾರಂಭಗೊಂಡ ಮಹಿಳಾ ಚಳುವಳಿಯ ಹಿನ್ನೆಲೆ, ಮೊದಲಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪಡೆಯಲು ಸಂಘಟಿತವಾದರೂ ನಂತರದಲ್ಲಿ ವಿಛಿದ್ರಕಾರಿ ನೀತಿ ರೀತಿಗಳು, ಪುರುಷ ಪ್ರಾಧಾನ್ಯತೆಯನ್ನೇ ಗುರಿಯಾಗಿಟ್ಟುಕೊಂಡು ಪುರುಷರನ್ನು ವಿರೋಧಿಸಲು ದುಡಿಯುವ ಜನತೆಯಲ್ಲಿ ಒಡಕು ಮೂಡಿಸುತ್ತಿರುವ ಬಗ್ಗೆ ತಿಳಿಸಿಕೊಟ್ಟರು. ಅದರಿಂದ ಇಡೀ ಜನಸಂಖ್ಯೆಯ ಅರ್ಧಭಾಗವಾಗಿರುವ ಮಹಿಳಾ ವಿಭಾಗವನ್ನು ದಾರಿ ತಪ್ಪಿಸುತ್ತಿರುವ ಬಗ್ಗೆ ವಿವರಿಸಿದರು. ○

ರಾಷ್ಟ್ರಪತಿ ಚುನಾವಣೆ - ಮೂರು ನಿಲುವುಗಳು

ಅಧ್ಯಕ್ಷರ ಚುನಾವಣೆಯ ಘೋಷಣೆಯಾಗುವುದಕ್ಕೆ ಮೊದಲೇ ನಡೆದ ಎಲ್ಲಾ ಪ್ರಸಂಗಗಳೂ ಹಾಗೂ ತಳೆದ ನಿಲುವುಗಳು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯ ನ್ನಾರಿಸುವಲ್ಲಿ ಮತ್ತಷ್ಟು ಸ್ಪಷ್ಟವಾಗಿ ಪ್ರಕಟಗೊಂಡವು ಎಂಬುದನ್ನು ಗಮನಿಸಬೇಕು.

ಐಕ್ಯರಂಗದ ಪ್ರಸ್ತುತ ಸಂಚಿಕೆಯನ್ನು ಓದುಗರನೇಕರು ಓದುವ ವೇಳೆಗಾಗಲೇ ರಾಷ್ಟ್ರಪತಿಗಳ ಚುನಾವಣೆಯ ಫಲಿತಾಂಶವೇ ಬಂದಿರಬಹುದು. ಚುನಾವಣೆಗೆ ಮೊದಲು ನಡೆದ ಘಟನೆಗಳ ಹಿನ್ನೆಲೆ ಮುಖ್ಯವಾಗಿ ರಾಷ್ಟ್ರಪತಿ ಸ್ಥಾನದ ಬಗೆಗೇ ನಡೆದ ವಿರಸ ಈ ಬಾರಿಯ ಅಧ್ಯಕ್ಷ ಚುನಾವಣೆಗೆ ಇನ್ನಿಲ್ಲದ ಪ್ರಾಮುಖ್ಯತೆಯನ್ನು ಒದಗಿಸಿದೆ.

ಈಗಾಗಲೇ ಐಕ್ಯರಂಗದಲ್ಲಿ ಈ ಚುನಾವಣೆಯ ವಿವಾದದ ಬಗೆಗೆ ಪ್ರಕಟವಾಗಿದೆ. ಅಧ್ಯಕ್ಷಚುನಾವಣೆಗೆ ಬಹಳ ದಿನ ಮೊದಲೇ ರಾಷ್ಟ್ರಪತಿ ಸ್ಥಾನಕ್ಕೆ ಎಂತಹ ಅಭ್ಯರ್ಥಿಬೇಕೆಂಬ ಬಗ್ಗೆ ನಿರ್ದಿಷ್ಟವಾದ ಮೂರು ಅಭಿಪ್ರಾಯಗಳು ದೇಶದ ರಾಜಕೀಯ ರಂಗದಲ್ಲಿ ರೂಪುಗೊಂಡವು.

ಒಂದನೆಯ ನಿಲುವು

ಬೋಫೋರ್ಸ್ ಹಗರಣ, ಸಬ್ ಮೇರಿನ್ ಪ್ರಕರಣ ಹಾಗೂ ಸ್ವಿಸ್‌ಬ್ಯಾಂಕ್‌ಗಳ ಕಳ್ಳ ಲೆಕ್ಕದ ಬಗ್ಗೆ ವಿವರಗಳನ್ನು ಲೋಕಸಭೆಗೆ ನಾನು ಯಾವ ವಿವರಗಳನ್ನೂ ನೀಡಬೇಕಾಗಿಲ್ಲ. ಪ್ರಧಾನಿಯ ನಿಲುವು ಲೋಕಸಭೆ, ರಾಜ್ಯಸಭೆಯ ಅಧ್ಯಕ್ಷರ ಸ್ಥಾನವನ್ನುಪಯೋಗಿಸಿ ಲೋಕಸಭೆಯಲ್ಲಿ ಚರ್ಚೆಯನ್ನು ತಡೆಹಿಡಿಯೊದು ಒಂದುಕಡೆ ಮತ್ತೊಂದು ಕಡೆ ಈ ಬಗ್ಗೆ ವಿವರಗಳನ್ನು ಕೇಳಿದ ರಾಷ್ಟ್ರಪತಿಗೆ ಈ ವಿವರಗಳನ್ನು ನಾವು ನಿಮಗೆಕೊಡಬೇಕಾಗಿಲ್ಲ ಎಂಬನಿಲುವು. ಹೀಗೆ ಲೋಕಸಭೆಯ ಹಕ್ಕಿರಲಿ ತಾವೇ ಆಯ್ಕೆಮಾಡಿದತಮ್ಮ ಪಕ್ಷದವರೇ ಆದ ಅಧ್ಯಕ್ಷರ ಹಕ್ಕನ್ನೂ ಮೊಟಕು ಮಾಡುವ ಕಾಂಗ್ರೆಸ್‌ನ ಸರ್ವಾಧಿಕಾರಿ ಮನೋಭಾವ ಚುನಾಯಿತ ಪ್ರತಿನಿಧಿಗಳ ಹಕ್ಕನ್ನು ನಿರಾಕರಿಸುವ ಮೂಲಕ ಪ್ರಜಾಸತ್ತೆಯ ಬುಡಕ್ಕೆ ಕೊಡಲಿಪೆಟ್ಟು.

ಎರಡನೆಯ ನಿಲುವು

ಅಧ್ಯಕ್ಷರು ತಮ್ಮ ಸಂವಿಧಾನದತ್ತ ಅಧಿಕಾರವನ್ನು ಚಲಾಯಿಸಬೇಕು. ಎಂಬ ಪ್ರಧಾನಿಯ ಕೈಗೊಂಬೆಯಾಗಬಾರದು ಎಂಬತಿಳುವಳಿಕೆಜೇಲ್‌ಸಿಂಗ್‌ರಿಗೆ ತಡವಾಗಿಯಾದರೂ ಮೂಡಿದದೆನೋ ಸರಿ.ಆದರೆ ಸಂವಿಧಾನ ಅವರಿಗೆ ನೀಡಿದ ಅಧಿಕಾರದ ಪರಿಮಿತಿಯನ್ನು ಮೀರಿ ಹಿಂದೆ ಕಾಂಗ್ರೆಸ್ ರಾಜ್ಯಪಾಲರುಗಳನ್ನುಪಯೋಗಿಸಿ ವಿರೋಧ ಪಕ್ಷಗಳ ಸರ್ಕಾರವನ್ನು ವಿಧಾನಸಭೆಯ ಅಭಿಪ್ರಾಯದ ವಿರುದ್ಧವಾಗಿತೆಗೆದೆಸೆದಂತೆ ಕೇಂದ್ರ ಸರ್ಕಾರವನ್ನೂ ಕಿತ್ತು ಹಾಕುವ ಅಧಿಕಾರವಿದೆ. ಲೋಕಸಭೆಯಲ್ಲಿ ಈ ಸರ್ಕಾರಕ್ಕೆ ಬಹುಮತವಿದ್ದರೂ ಅದನ್ನು ಗಣಿಸಬೇಕಾಗಿಲ್ಲ ಎಂಬ ಮಾತುಗಳು ಸ್ಪಷ್ಟವಾಗಿ ಕೇಳಿಬಂತು. ಇದು ಕೂಡ ಜನಪ್ರತಿನಿಧಿಗಳಿಂದ ಕೂಡಿದ ಲೋಕಸಭೆಯೇ ಸರ್ವೋಚ್ಚ ಎಂಬ ಪ್ರಜಾಸತ್ತೆಯ ಅಡಿಪಾಯಕ್ಕೇ ಕೊಡಲಿ ಪೆಟ್ಟು ಹಾಕುವಂತಹದ್ದೇ ಸರಿ. ಇದು ಜೇಲ್‌ಸಿಂಗ್‌ರ ಸುತ್ತ ಸೇರಿದ್ದ ಕೆಲವರ ನಿಲುವು.

ಮೂರನೆಯ ನಿಲುವು

ದೇಶದಲ್ಲಿ ನಡೆಯುವ ಯಾವುದೇ ಸಂಗತಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳುವ ಹಕ್ಕು ಲೋಕ ಸಭೆಗಿದೆ. ಎಲ್ಲಾ ಹಗರಣಗಳ ಬಗ್ಗೆ ಸರ್ಕಾರಕ್ಕಿರುವ ಎಲ್ಲಾ ಮಾಹಿತಿಯನ್ನು ಲೋಕ ಸಭೆಯ ಮುಂದಿಡಬೇಕು ಎಂಬ ತತ್ವವನ್ನು ಪ್ರತಿಪಾದಿಸುತ್ತಾ ಅಧ್ಯಕ್ಷರಿಗೂ ಈ ಎಲ್ಲಾ ಮಾಹಿತಿಯನ್ನು ಪಡೆಯುವ ಹಕ್ಕಿದೆ. ಪ್ರಧಾನಿಗೆ ಹಿತವಚನ ಮಾರ್ಗದರ್ಶನ ಮಾಡುವ ಹಕ್ಕಿದೆ. ಆದರೆ ಅವರನ್ನು ಆರಿಸುವುದೂ ವಜಾಮಾಡುವುದೂ ಕೇವಲ ಲೋಕ ಸಭೆಗೆ ಮಾತ್ರ ಬಿಟ್ಟ ವಿಚಾರ. ಲೋಕಸಭೆಯೇ ಸರ್ವೋಚ್ಚ ಎಂಬ ನಿಲುವು ಎಡ ಪಕ್ಷಗಳದ್ದು ಇದನ್ನನುಸರಿಸಿಯೇ ಸಿ.ಪಿ.ಐ. (ಎಂ) ಸಿ.ಪಿ.ಐ. ಪಕ್ಷಗಳು ಅಧ್ಯಕ್ಷರು ಚುನಾಯಿತ ಸರ್ಕಾರವನ್ನು ವಜಾಮಾಡುವುದೆಂದರೆ ಸಂವಿಧಾನದ ವಿರುದ್ಧ ದಂಗೆಯೆದ್ದಂತೆಯೇ ಸರಿ ಎಂದು ಖಡಾ ಖಂಡಿತವಾಗಿ ಘೋಷಿಸಿದ್ದು.

ಈ ಘೋಷಣೆಯನ್ನು ಕೇಳಿದ ತಕ್ಷಣವೇ ಅನೇಕ ಪತ್ರಿಕೆಗಳು ಎಡಪಕ್ಷಗಳ ಮೇಲೆ ಮುಖ್ಯವಾಗಿ ಸಿ.ಪಿ.ಐ. (ಎಂ) ಮೇಲೆ ಧಾಳಿಯನ್ನಾರಂಭಿಸಿದುವು. ಆಗ ಬೆಂಗಳೂರಿನಲ್ಲಿ ತಮ್ಮ 10ನೇಯ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದ ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್‌ರವರು "ಈಗ ಕಮ್ಯೂನಿಸ್ಟ್ ಪಕ್ಷಗಳು ಈ ಹೇಳಿಕೆ ಹೊರಡಿಸುವ ಅಗತ್ಯನನಗೇನೂ ಕಾಣಲಿಲ್ಲ. ರಾಜೀವ್‌ಗಾಂಧಿಯನ್ನು ಸಂವಿಧಾನ ವಿರುದ್ಧ

[5ನೇ ಪುಟ ನೋಡಿ]

"ಯಾರು ಸಂಸತ್‌ನ ಸರ್ವೋಚ್ಚತೆಯನ್ನು ರಕ್ಷಿಸಲು ಇಚ್ಛಿಸುತ್ತಾರೋ, ಪ್ರಧಾನಿ ಹಾಗೂ ಅಧ್ಯಕ್ಷರ ಎರಡು ಪದವಿಗಳು ಸಂಸದೀಯ ವ್ಯವಸ್ಥೆಯನ್ನು ಬುಡಮೇಲು ಮಾಡಲು ಉಪಯೋಗಿಸಬಾರದೆನ್ನುತ್ತಾರೋ ಅವರೆಲ್ಲರೂ ವಿರೋಧ ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕೆಂದು ಕೋರುತ್ತೇವೆ"

– ಸಿ. ಪಿ. ಐ. (ಎಂ)

ಸಂವಿಧಾನವನ್ನು ರಕ್ಷಿಸುವ ಅಭ್ಯರ್ಥಿ

9ನೇ ರಾಷ್ಟ್ರಪತಿ ಚುನಾವಣೆಯಲ್ಲಿ ದೇಶದ ಸಮ್ಮುಖ ಚರ್ಚೆಗೆ ಬಂದಿರುವ ಮುಖ್ಯ ಪ್ರಶ್ನೆಯೆಂದರೆ ಸಂವಿಧಾನದ ಪ್ರಕಾರ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಯ ಕಾರ್ಯನಿರ್ವಹಣೆಯ ರೀತಿ ರಾಷ್ಟ್ರಪತಿಗಳು ಪ್ರಧಾನ ಮಂತ್ರಿ ಮತ್ತು ಅದರ ಮಂತ್ರಿ ಮಂಡಲ ನೀಡಲೊಪ್ಪುವ ಮಾಹಿತಿಯನ್ನು ಮಾತ್ರ ಪಡೆಯಲು ಅರ್ಹರು ಎಂದು ಆಳುವ ಪಕ್ಷದ ಅಭಿಪ್ರಾಯ. ಅದನ್ನು ಪ್ರತಿನಿಧಿಸುವ ಅಭ್ಯರ್ಥಿ ವೆಂಕಟರಾಮನ್. ಆದರೆ ಪ್ರಜಾಪ್ರಭುತ್ವವಾದಿಗಳು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ವಿರೋಧ ಪಕ್ಷಗಳ ಸರ್ವಸಮ್ಮತ ಅಭ್ಯರ್ಥಿ ಸಂವಿಧಾನವನ್ನು ರಕ್ಷಿಸುವ ಅಭ್ಯರ್ಥಿ. ಶ್ರೀ ವಿ.ಆರ್.ಕೃಷ್ಣ ಅಯ್ಯರ್ ಅಭ್ಯರ್ಥಿಯಾದ ಮೇಲೆ ದೇಶಾದ್ಯಂತ ಸಂಚರಿಸಿ ನಡೆಸಿರುತ್ತಿರುವ "ಚುನಾವಣಾ ಯಾತ್ರೆ"ಯಲ್ಲಿ ಹಾಗೂ ಅದರ ಮೊದಲು ಈ ವಿಷಯದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಕೆಲವು ಇಲ್ಲಿವೆ.

ರಾಷ್ಟ್ರಪತಿ ಹೇಗಿರಬೇಕು ?

'ಚಮಚಾ' ಆಗಿರದ, ಸಂವಿಧಾನವನ್ನು ಎತ್ತಿಹಿಡಿಯುವ, ತನ್ನ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಹೊಣೆಗಳನ್ನು ಅರಿತಿರುವ ವ್ಯಕ್ತಿ ರಾಷ್ಟ್ರಪತಿ ಆಗಬೇಕು.

ರಾಷ್ಟ್ರಪತಿಯೆಂದರೆ ಒಂದು ಗಿಳಿಯಲ್ಲ, ಕೈಗೊಂಬೆಯಲ್ಲ ಅಥವಾ ಧ್ವನಿಗಾರುಡಿಗನಲ್ಲ. ಸಲಹೆ ನೀಡುವ, ಎಚ್ಚರಿಸುವ ಮತ್ತು ದೇಶಕ್ಕೆ ಮಾರ್ಗ ನಿರ್ದೇಶನ ನೀಡಬಲ್ಲ ಋಷಿಯಾಗಿರಬೇಕು; ಹಿರಿಯನಾಗಿರಬೇಕು.

X X X

ರಾಷ್ಟ್ರಪತಿಯ ಹಕ್ಕುಬಾಧ್ಯತೆಗಳೇನು ?

ರಾಷ್ಟ್ರಪತಿ ಬಹುಮಟ್ಟಿಗೆ ಶಿಷ್ಟಾಚಾರಕ್ಕಾಗಿದ್ದರೂ ಸಂವಿಧಾನಾತ್ಮಕವಾಗಿ ಸಂಗತವಾದ, ತನ್ನ "ಸಲಹೆ ನೀಡುವ, ಎಚ್ಚರಿಸುವ ಮತ್ತು ಪ್ರೋತ್ಸಾಹಿಸುವ" ಹಕ್ಕನ್ನು ಚಲಾಯಿಸಬಲ್ಲ, ತನ್ನ ನೈತಿಕ ಅಧಿಕಾರವನ್ನು ಬೀರಬಲ್ಲ, ಆಕ್ಷೇಪಣೆ ಎತ್ತಿ ಮಂತ್ರಿ ಮಂಡಲ ಪುನರಾಲೋಚನೆ ಮಾಡುವಂತೆ ಹೇಳಬಲ್ಲ, ಆದರೆ ಅಂತಿಮವಾಗಿ 'ಅಸ್ತು' ಎನ್ನುವ ವ್ಯಕ್ತಿ. ಸಂವಿಧಾನದ ಹಳಿ ತಪ್ಪದಂತೆ ದೇಶವನ್ನು ನಡೆಸುವಲ್ಲಿ ಆತನಪಾತ್ರ ಇದು. ಮಂತ್ರಿ ಮಂಡಲವನ್ನು ಮೀರುವುದೆಂದರೆ ಸಂವಿಧಾನವನ್ನು ಉಲ್ಲಂಘಿಸಿದಂತೆ. ಆದರೆ ಮಂತ್ರಿ ಮಂಡಲದ ವಿವೇಚನೆಯ ಬಗ್ಗೆ ಭಿನ್ನಾಭಿಪ್ರಾಯವಿದ್ದಾಗ ತಕರಾರು ಎತ್ತದಿದ್ದರೆ, ಪುನರಾಲೋಚನೆ ಮಾಡಲು ಒತ್ತಾಯಿಸದಿದ್ದರೆ ಸೀಮಿತವಾದರೂ, ಬಹುಮಹತ್ವದಿಂದ ಕೂಡಿದ ತನ್ನ ತ್ರಿವಳಿ ಕರ್ತವ್ಯಗಳನ್ನು ಆತ ಕೈ ಬಿಟ್ಟಂತೆಯೇ ಸರಿ.

X X X

ರಾಷ್ಟ್ರಪತಿಗೆ ಸಂವಿಧಾನಾತ್ಮಕ ಪರಿಮಿತಿಗಳು ಹಾಗೂ ಮಂತ್ರಿಮಂಡಲದ ಅಧಿಕಾರಗಳ ಅರಿವಿರಬೇಕು.

X X X

ಸಲ್ಲಹೆ ನೀಡುವುದು ರಾಷ್ಟ್ರಪತಿಯ ಕೆಲಸ. ಅದನ್ನು ಸ್ವೀಕರಿಸುವುದು ಅಥವಾ ನಿರಾಕರಿಸುವುದು ಮಂತ್ರಿ ಮಂಡಲಕ್ಕೆ ಬಿಟ್ಟದ್ದು. ಆದರೆ ಸಲಹೆಯಂತೂ ಮಹತ್ವಪೂರ್ಣವಾದದ್ದು. ಪ್ರಧಾನ ಮಂತ್ರಿ ದೇಶವನ್ನು ತಪ್ಪುದಾರಿಗೆಳೆಯುತ್ತಿದ್ದರೆ ಅದನ್ನು ಸಂಸತ್ತು ಸರಿಪಡಿಸಬೇಕು. ಸಂಸತ್ತು ಹಾಗೆ ಮಾಡದಿದ್ದರೆ ಬೇರೆ ಯಾರೂ ಏನೂ ಮಾಡಲು ಸಾಧ್ಯವಿಲ್ಲ. ಜನತೆ ಸಂಸತ್ತಿಗೆ ಚುನಾಯಿಸಿದ ತಮ್ಮ ಪ್ರತಿನಿಧಿಗಳ ಮೂಲಕ ಕಾರ್ಯಾಚರಣೆ ನಡೆಸಬಹುದಷ್ಟೆ. ಇದರಲ್ಲಿ ರಾಷ್ಟ್ರಪತಿಯ ಮಧ್ಯ ಪ್ರವೇಶಕ್ಕೆ ಎಲ್ಲಿದೆ ಅವಕಾಶ ? ಬೇಕಾದರೆ ಆತ ಪ್ರತಿಭಟಿಸಿ ರಾಜೀನಾಮೆ ನೀಡಬಹುದು. ದೇಶವನ್ನು ಜಾಗೃತಗೊಳಿಸುವ ಒಂದು ವಿಧಾನವದು.

X X X

ಪ್ರಧಾನ ಮಂತ್ರಿ ಸಂವಿಧಾನವನ್ನು ಬುಡ ಮೇಲು ಮಾಡಬಹುದು ಎಂದು ಹೇಳುವುದಾದರೆ ರಾಷ್ಟ್ರಪತಿ ಕೂಡಾ ಹಾಗೇ ಮಾಡಿ ಸರ್ಕಾರವನ್ನು ವಜಾ ಮಾಡಬಹುದು. ರಾಷ್ಟ್ರಪತಿಯಾದರೆ ಉತ್ತರ ಹೇಳಬೇಕಾಗಿಲ್ಲ. ಆದರೆ ಪ್ರಧಾನ ಮಂತ್ರಿ ಸಂಸತ್ತಿಗೆ ಉತ್ತರ ಹೇಳಬೇಕು ಆಳುವ ಪಕ್ಷದ ಬಹುಪಾಲು ಸದಸ್ಯರು ಪ್ರಧಾನ ಮಂತ್ರಿ ದಮನಕಾರಿ ಎಂದು ಭಾವಿಸಿದರೆ ಬೇರೆ ಪಕ್ಷ ರಚಿಸಿಕೊಳ್ಳಬಹುದು. ಆದರೆ ರಾಷ್ಟ್ರಪತಿ ಸರ್ವಾಧಿಕಾರಿಯಂತೆ ನಡೆಯಲು ಸಾಧ್ಯವಿಲ್ಲ. ಅವನದು ರಚನಾತ್ಮಕ ಪಾತ್ರ. ಮಾಹಿತಿಕೇಳಿ ಆತ ಸಂವಿಧಾನ ರೀತ್ಯಾ ತನ್ನ ಕರ್ತವ್ಯ ನೆರವೇರಿಸಬೇಕು. ಪ್ರಧಾನಮಂತ್ರಿ ಮಾಹಿತಿ ನೀಡದಿದ್ದರೆ ಆತ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಂತಾಗುತ್ತದೆ. ಇದಕ್ಕೆ ಬೇರೆ ಪರಿಹಾರವಿಲ್ಲ. ಸುಪ್ರೀಂ ಕೋರ್ಟಿನ ಆದೇಶವನ್ನು ಕಾರ್ಯಾಂಗ ಪಾಲಿಸದಿದ್ದರೆ ನ್ಯಾಯಾಧೀಶರು ರಸ್ತೆಗಿಳಿಯಲು ಸಾಧ್ಯವೇ ?

X X X

ಪ್ರಧಾನ ಮಂತ್ರಿಗೆ ಸಂಸತ್ತಿನಲ್ಲಿ ಬಹುಮತವಿರುವವರೆಗೆ ಆತನನ್ನು ವಜಾ ಮಾಡುವುದು ರಾಷ್ಟ್ರಪತಿಗೆ ಸಲ್ಲದ ಕೆಲಸ ಆದರೆ ಇದರರ್ಥ ಒಂದು ವಿಶಿಷ್ಟ ಸೂಕ್ಷ್ಮ ಪರಿಸ್ಥಿತಿಯಲ್ಲೂ ರಾಷ್ಟ್ರಪತಿ ಆ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆಂದೇನಲ್ಲ. ಆದರೆ ಅಂತಹ ಸಂದರ್ಭ ಬರುವುದಿಲ್ಲ.

X X X

ಇವೆಲ್ಲಾ ಒಂದು ಸನ್ನಿವೇಶದ ವಿಕೃತ ರೋಗಗ್ರಸ್ತ, ಭಯಪೀಡಿತ ಗ್ರಹಿಕೆ. ಇದಕ್ಕೆ ಕಾರಣ ನಾವೀಗ ಹಾದು ಹೋಗುತ್ತಿರುವ ಘಟ್ಟ.

X X X

ಸದ್ಯದ ರಾಷ್ಟ್ರಪತಿ-ಪ್ರಧಾನ ಮಂತ್ರಿ ವಿರಸ

ಇದು ದೇಶದ ರಾಜಕೀಯದ ಮಟ್ಟವನ್ನು ಅಧೋಗತಿಗಿಳಿಸಿ ಸಂವಿಧಾನಾತ್ಮಕ ಬಿಗುವು ಸೃಷ್ಟಿಸಿ ಸಮಸ್ತ ರಾಜಕೀಯ ಪ್ರಕ್ರಿಯೆಯನ್ನು ಅಪಾಯಕ್ಕೀಡು ಮಾಡಿದೆ.

X X

ಅಂಚೆ ಮಸೂದೆಯಿಂದ ಆರಂಭವಾದ ಈ ವಿರಸದಲ್ಲಿ ಇಬ್ಬರಲ್ಲೂ ತಪ್ಪಿದೆ. ಕೇಳಿದ ಮಾಹಿತಿಯನ್ನು ಒದಗಿಸದಿರುವುದು ಪ್ರಧಾನ ಮಂತ್ರಿಯ ತಪ್ಪಾದರೆ, ಮಸೂದೆಗೆ ಸ್ವೀಕೃತಿ ನೀಡದಿರುವುದು ರಾಷ್ಟ್ರಪತಿಗಳ ತಪ್ಪು. ಅವರೇಕೆ ಒಪ್ಪಿಗೆ ನೀಡಲು ವಿರೋಧಿಸಬೇಕು ? ಆತ ಮಸೂದೆಯನ್ನು ಮಂತ್ರಿಮಂಡಲಕ್ಕೆ ಹಿಂದಿರುಗಿಸಬಹುದಷ್ಟೆ ಸಂಸತ್ತಿಗಲ್ಲ. ಮಂತ್ರಿಮಂಡಲ "ದಯವಿಟ್ಟು ಸಹಿಮಾಡಿ" ಅಂದರೆ ಆತ ಸಹಿ ಮಾಡಲೇಬೇಕು.

X X X

ಮಾಹಿತಿ ಕೇಳುವ ರಾಷ್ಟ್ರಪತಿಗಳ ಅಧಿಕಾರ "ಯಾವುದೇ ಉದ್ದೇಶಿತ ಕ್ರಮದ ಬಗ್ಗೆ ತನ್ನ ಆಕ್ಷೇಪಣೆ ವ್ಯಕ್ತಪಡಿಸಿ....ಅದರ ಬಗ್ಗೆ ಮತ್ತೆ ಆಲೋಚಿಸುವಂತೆ" ಹೇಳುವ ಆತನ ಸಂವಿಧಾನ ರೀತ್ಯಾ ತನ್ನ ವರ್ತವ್ಯ ನಿರ್ವಹಿಸುವಲ್ಲಿ ಅತ್ಯಂತ ಪ್ರಧಾನವಾದ ಅಧಿಕಾರ.

X X X

ಕಾಂಗ್ರೆಸ್ಸೇತರ ರಾಜ್ಯಗಳಲ್ಲಿ ರಾಜ್ಯಪಾಲರು ಸಂವಿಧಾನದ 167 (ಬಿ)ಕಲಮಿನ ಪ್ರಕಾರ ಕೇಳಿದ ಮಾಹಿತಿಯನ್ನು ನೀಡಲು ಮುಖ್ಯಮಂತ್ರಿ ನಿರಾಕರಿಸಿದ್ದರೆ ರಾಜ್ಯಪಾಲರು 356 ನೇ ಕಲಮಿನ ಪ್ರಕಾರ ರಾಜ್ಯದಲ್ಲಿ ಆಡಳಿತ ಸಂವಿಧಾನದ ರೀತ್ಯಾ ನಡೆಯುತ್ತಿಲ್ಲ ಎಂದು ವರದಿ ಮಾಡುತ್ತಿದ್ದರು. 167 (ಬಿ) ಕಲಮಿನ ಪ್ರಕಾರ ನಡೆದುಕೊಳ್ಳದಿರುವುದರಿಂದ ಸಂವಿಧಾನವನ್ನು ಮುರಿದಂತಾಗುವುದಾದರೆ 78

(4ನೇ ಪುಟದಿಂದ)

ವಾಗಿ ಪ್ರಧಾನಿಯನ್ನಾಗಿ ಮಾಡಿದಾಗ ಕಮ್ಯೂನಿಸ್ಟ್ ಪಕ್ಷಗಳೇಕೆ ಆ ಬಗ್ಗೆ ಪ್ರತಿಭಟಿಸಲಿಲ್ಲ" ಎಂದು ಟೀಕಿಸಿದ್ದರು.

ಅಧ್ಯಕ್ಷರ ಚುನಾವಣೆಯ ಘೋಷಣೆಯಾಗುವುದಕ್ಕೆ ಮೊದಲೇ ನಡೆದ ಎಲ್ಲಾ ಪ್ರಸಂಗಗಳೂ ಹಾಗೂ ತಳೆದ ನಿಲುವುಗಳು ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯನ್ನಾರಿಸುವಲ್ಲಿ ಮತ್ತಷ್ಟು ಸ್ಪಷ್ಟವಾಗಿ ಪ್ರಕಟಗೊಂಡವು ಎಂಬುದನ್ನು ಗಮನಿಸಬೇಕು.

ಪಕ್ಷಾತೀತನಾದ, ಇಡೀ ದೇಶವೇ ಗೌರವಿಸಲರ್ಹನಾದ, ಅಧ್ಯಕ್ಷ ಸ್ಥಾನವನ್ನು ನಿರುಪಯೋಗಿಸುವ ಅಥವಾ ದುರುಪಯೋಗ ಪಡಿಸಿಕೊಳ್ಳುವ ಯಾವುದೇ ಪ್ರಯತ್ನವನ್ನು ವಿರೋಧಿಸುವ ಅಭ್ಯರ್ಥಿಯನ್ನು ಕಾಂಗ್ರೆ ಕೂಡ ಸೇರಿ ಎಲ್ಲಾ ಪಕ್ಷಗಳ ಸರ್ವ ಸಮ್ಮತ ಅಭ್ಯರ್ಥಿಯಾಗಿ ಆರಿಸೋಣ.

ಆದರೆ ತನ್ನ ಪಕ್ಷದ, ತನ್ನ ಕೈಗೊಂಬೆಯಾಗ ಬಲ್ಲ ನೆಚ್ಚಿನ ಭಂಟ–ನನ್ನು ಎಲ್ಲಾ ಪಕ್ಷಗಳೂ ಒಪ್ಪುವಂತೆ ಮಾಡಬೇಕು ಎಂಬ ಕಾಂಗ್ರೆ ಪ್ರಯತ್ನ ಅಧ್ಯಕ್ಷ ಸ್ಥಾನಕ್ಕಿರುವ ಸಂವಿಧಾನದತ್ತ ಅಧಿಕಾರವನ್ನು ಕಸಿದುಕೊಳ್ಳುವ ಅವರ ನಿಲುವಿನ ಮುಂದುವರಿಕೆಯಾಯಿತು. ವಿರೋಧ ಪಕ್ಷಗಳಾವುವೂ ಅದನ್ನು ಒಪ್ಪಲು ಸಾಧ್ಯವಿಲ್ಲ ಎಂಬಂತಾಯಿತು.

ಬಿ.ಜೆ.ಪಿ.ಯನ್ನು ಹೊರತುಪಡಿಸಿದ ವಿರೋಧ ಪಕ್ಷಗಳೆಲ್ಲಾ ಸೇರಿ ದೆಹಲಿಯಲ್ಲಿ ನಡೆಸಿದ ಸಭೆ ಸರ್ವ ಸಮ್ಮತ ಅಭ್ಯರ್ಥಿ ಸಾಧ್ಯವಾಗದಿದ್ದರೆ ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ನಿಲ್ಲಿಸಲು ಮೂರು ಜನರ ಸಮಿತಿಯನ್ನು ನೇಮಿಸಿತು. ಈ ಸಮಿತಿ ಮೂರು ಬಾರಿ ಸಭೆ ಸೇರಿ ಕೃಷ್ಣ ಐಯ್ಯರ್‌ರವರನ್ನೇ ವಿರೋಧ ಪಕ್ಷಗಳ ಅಭ್ಯರ್ಥಿಯನ್ನಾಗಿಸಬೇಕೆಂಬ ತೀರ್ಮಾನ ತೆಗೆದುಕೊಂಡರೂ ಕೊನೆಯಗಳಿಗೆಯಲ್ಲಿ ಹಿಂದೇಟು ಹೊಡೆದು ಕಾಂಗ್ರೆನ ನಿಷ್ಠಾವಂತ ಸದಸ್ಯರಾದ ಜೇಲ್‌ಸಿಂಗ್‌ರವರನ್ನೇ ಅಧ್ಯಕ್ಷಸ್ಥಾನವನ್ನು ಸಂವಿಧಾನ ಮೀರಿ ಉಪಯೋಗಿಸುವ ಇಚ್ಛೆಯುಳ್ಳ ಜೇಲ್‌ಸಿಂಗ್‌ರವರನ್ನು ವಿರೋಧ ಪಕ್ಷಗಳ ಅಭ್ಯರ್ಥಿಯನ್ನಾಗಿಸಬೇಕು ಎಂಬ ಕೊನೆಗಳಿಗೆ ಪ್ರಯತ್ನ ನಡೆಸಿದ ಬಂಡವಾಳಶಾಹಿ ವಿರೋಧ ಪಕ್ಷಗಳಾದ ಜನತಾ, ತೆಲುಗುದೇಶಂ ಹಾಗೂ ಕಾಂಗ್ರೆನ ಸಂದರ್ಭ ಸಾಧಕ ಗುಂಪುಗಳು ಎರಡನೆಯ ನಿಲುವಿಗೆ ಜಾರಿದಂತಾಯಿತು. ಈ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ)ಹಾಗೂ ಎಡ ಪಕ್ಷಗಳು ಇದಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ಇಂತಹ ಪ್ರಯತ್ನವನ್ನು ನಿರಾಕರಿಸಿದುವು. ಈ ತತ್ವ ನಿಷ್ಠ ನಿಲುವು ಸಂವಿಧಾನವನ್ನು ದುರುಪಯೋಗಪಡಿಸಿಕೊಂಡು ಹಿತ್ತಲ ಬಾಗಿಲಿನಿಂದ ಅಧಿಕಾರಕ್ಕೆ ಬರಬೇಕೆಂಬುವರಿಗೆಲ್ಲಾ ಕಣ್ಣು ಕೆಂಪಗಾಗುವಂತೆ ಮಾಡಿದ್ದರೆ ಆಶ್ಚರ್ಯವೇನು? ಸಿ.ಪಿ.ಐ.(ಎಂ) ಮೇಲೆ ಅಪಪ್ರಚಾರದ ಸರಮಾಲೆಯನ್ನೇ ಪೋಣಿಸುತ್ತಿರುವ ಬಿ.ಜೆ.ಪಿ. ತಾನು ಚುನಾವಣೆಯಲ್ಲಿ ಮತ ನೀಡುವುದಿಲ್ಲ ಎಂದು ಹೇಳುತ್ತಿದ್ದರೂ ವೆಂಕಟರಾಮನ್‌ರವರೇ ಕೃಷ್ಣ ಐಯ್ಯರ್‌ರವರಿಗಿಂತ ಉತ್ತಮ ಎಂಬ ವಾದವನ್ನು ಅವರ ಪತ್ರಿಕೆ "ಆರ್ಗನೈಸರ್" ಮಂಡಿಸಿದೆ. ಅವರ ನಾಯಕ ಅದ್ವಾನಿ ಇದನ್ನೇ ಸುತ್ತಿ ಬಳಸಿ ಹೇಳಿದ್ದಾರೆ. ಸಂವಿಧಾನದತ್ತ ಅಧಿಕಾರವನ್ನು ಉಪಯೋಗಿಸಲಾರದ ಅಧ್ಯಕ್ಷನೇ ಬೇಕು ಎಂಬ ನೀತಿಗೆ ಕಾಂಗ್ರೆ ಜೊತೆಯಲ್ಲಿ ಬಿ.ಜೆ.ಪಿ. ಹಾಗೂ ಇದೇ ನಿಲುವನ್ನೇ ಪ್ರತಿಪಾದಿಸುತ್ತಿರುವ ಪತ್ರಿಕೆಗಳೂ ಒಲಿದಂತಾಗುತ್ತದೆ.

ಆಳುವ ಸರ್ವಾಧಿಕಾರಿ ಕಾಂಗ್ರೆ ಪಕ್ಷ ಸಂವಿಧಾನವನ್ನು ದುರುಪಯೋಗ ಪಡಿಸುವ ನೀತಿಯನ್ನು 1947 ರಿಂದಲೇ ಆರಂಭಿಸಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಸಂವಿಧಾನ ಹಾಗೂ ಪ್ರಜಾಸತ್ತೆಯ ರಕ್ಷಣೆಯ ಮಾತನ್ನಾಡುವ ಬಂಡವಾಳಶಾಹಿ ವಿರೋಧ ಪಕ್ಷಗಳೂ ಸಂವಿಧಾನವನ್ನು ದುರುಪಯೋಗಪಡಿಸುವ ಅಧ್ಯಕ್ಷನಿಗಾಗಿ ಕಾತರಿಸಿದ್ದು ಏಕೆ? ಎಂಬುದು ಪ್ರಶ್ನೆ.

[6ನೇ ಪುಟ ನೋಡಿ]

ಅಧ್ಯಕ್ಷೀಯ ಚುನಾವಣೆಯ ಮತಗಳು

ಮುಂಬರುವ 9ನೇ ರಾಷ್ಟ್ರಪತಿ ಚುನಾವಣೆಯಲ್ಲಿ ಪ್ರತಿಯೊಬ್ಬ ಲೋಕ ಸಭಾ ಹಾಗೂ ರಾಜ್ಯಸಭಾ ಸದಸ್ಯರ ಮತದ ಬೆಲೆ 702. ವಿಧಾನಸಭಾ ಸದಸ್ಯರುಗಳ ಮತದ ಮೌಲ್ಯ ಅತೀ ಕಮ್ಮಿಯೆಂದರೆ ಸಿಕ್ಕಿಂನಲ್ಲಿ 7ಹಾಗೂ ಅತೀ ಹೆಚ್ಚೆಂದರೆ ಉತ್ತರ ಪ್ರದೇಶದಲ್ಲಿ 208. ಕರ್ನಾಟಕದ ಪ್ರತಿಯೊಬ್ಬ ವಿಧಾನ ಸಭಾ ಸದಸ್ಯರ ಮತದ ಬೆಲೆ 131. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಎಂ.ಎಲ್.ಎ.ಗಳ ಮತದ ಮೌಲ್ಯ ಅನುಕ್ರಮವಾಗಿ 152,151 ಮತ್ತು 26. ಆಂಧ್ರ ಪ್ರದೇಶ ಮತ್ತು ತಮಿಳುನಾಡಿದ್ದು ಅನುಕ್ರಮವಾಗಿ 148 ಮತ್ತು 176.

ಮತದ ಮೌಲ್ಯಗಳ ಸ್ಥೂಲ ವಿವರ ಹೀಗಿದೆ.

ಸದನ	ಒಟ್ಟು ಸದಸ್ಯ ಸಂಖ್ಯೆ	ಮತಗಳ ಒಟ್ಟು ಮೌಲ್ಯ
ಲೋಕಸಭೆ	543	3,81,186
ರಾಜ್ಯಸಭೆ	233	1,63,566
ವಿಧಾನ ಸಭೆಗಳು	3919	5,44,999
ಒಟ್ಟು	4695	10,89,751

ಕಾಂಗ್ರೆ–ವಿರೋಧಪಕ್ಷಗಳ ಬಲಾಬಲ

ಲೋಕಸಭಾ ಸದಸ್ಯರು	
ಕಾಂಗ್ರೆ ಹಾಗೂ ಮಿತ್ರಪಕ್ಷಗಳು	3,03,696
ವಿರೋಧ ಪಕ್ಷಗಳು	77,330
ರಾಜ್ಯ ಸಭಾ ಸದಸ್ಯರು	
ಕಾಂಗ್ರೆ ಹಾಗೂ ಮಿತ್ರ ಪಕ್ಷಗಳು	1,13,886
ವಿರೋಧ ಪಕ್ಷಗಳು	49,210
ವಿಧಾನ ಸಭೆಗಳು	
ಕಾಂಗ್ರೆ ಹಾಗೂ ಮಿತ್ರ ಪಕ್ಷಗಳು	3,00,943
ವಿರೋಧ ಪಕ್ಷಗಳು	2,39.952
ಒಟ್ಟು	
ಕಾಂಗ್ರೆ ಹಾಗೂ ಮಿತ್ರ ಪಕ್ಷಗಳು	7,18,525
ವಿರೋಧ ಪಕ್ಷಗಳು	3,66,492

ಅಂದರೆ ಅಂತರ 3,52,033 ಮತಗಳು

(ಬಿ) ಕಲಮಿನ ಪ್ರಕಾರ ನಡೆದುಕೊಳ್ಳದಿರುವುದೂ (ಮಾಹಿತಿ ನಿರಾಕರಿಸುವುದು) ಸಂವಿಧಾನದ ಉಲ್ಲಂಘನೆಯಾಗುತ್ತದೆ.

X X X

ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ಭಿನ್ನಭಿನ್ನವಾಗಿ ಯೋಚಿಸುವುದು ಹಾಗೂ ಸದಾ ವಿವಾದಗಳಲ್ಲಿ ತೊಡಗಿರುವುದರಿಂದ ಉಂಟಾದ ಸಂವೈಧಾನಿಕ ಅಸ್ಥಿರತೆ ದೇಶಕ್ಕೆ ಒಂದು ಅತ್ಯಂತ ಅಪಾಯಕಾರೀ ಆಂತರಿಕ ಬೆದರಿಕೆ.

X X X

ಹೆಚ್ಚು ಮಾಹಿತಿ, ಕಡಿಮೆ ದುರಹಂಕಾರ, ಹೆಚ್ಚು ಸಹಯೋಗ, ಕಡಿಮೆ ಅಪನಂಬಿಕೆ ಅಗತ್ಯ, ಮತ್ತು ತೃತೀಯ ಜಗತ್ತಿನಲ್ಲಿ ಹೆಚ್ಚುತ್ತಿರುವ ಬಿಗು ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಆದರೆ ದುರ್ಲಾಭ ಪಡೆಯುವ ಶಕ್ತಿಗಳು ಕಾದುಕೊಂಡಿರುವ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಮುಂದಾಗಿ ಕಾಣುವ ಮುತ್ಸದ್ದಿತನ ಅಗತ್ಯ. ಅದರ ಬದಲು ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ನಡುವೆ ಬಲಪರೀಕ್ಷೆ ಇಬ್ಬರಿಗೂ ತಕ್ಕುದಲ್ಲ; ಮಾತ್ರವಲ್ಲ, ರಾಜಕೀಯ ಅಸ್ಥಿರತೆ ಹುಟ್ಟಿಸುವಂತದ್ದು. ○

ಒಬ್ಬ ಕಾಂಗ್ರೆಸ್ ಮುಖ್ಯಮಂತ್ರಿ ಹೇಗೆ ಗೆದ್ದರು ?

ಸರಿಯಾಗಿ ಮೂವತ್ತು ವರ್ಷಗಳ ಹಿಂದಿನ ಕಥೆಯಿದು. 1957 ಪಶ್ಚಿಮ ಬಂಗಾಳದಲ್ಲಿ ಎರಡನೇ ವಿಧಾನ ಸಭಾ ಚುನಾವಣೆ ಘೋಷಿಸಲ್ಪಟ್ಟಿತು. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಕಮ್ಯೂನಿಸ್ಟ್ ಪಕ್ಷ ಕೆಲವು ವಿರೋಧ ಪಕ್ಷಗಳ ರಂಗ ರಚಿಸಿ ಅಧಿಕಾರ ರೂಢ ಪಕ್ಷಕ್ಕೆ ತೀವ್ರ ಸ್ಪರ್ಧೆ ಒಡ್ಡಿತ್ತು.

ಕಲ್ಕತ್ತಾ ನಗರದ ಬೋವ್ ಬಝಾರ್ ಚುನಾವಣಾ ಕ್ಷೇತ್ರ ರಾಜ್ಯದ ಮುಖ್ಯಮಂತ್ರಿ ಡಾ.ಬಿ.ಸಿ.ರಾಯ್ ಕಾಂಗ್ರೆಸ್ ಸ್ಪರ್ಧಿ. 1948ರಿಂದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಇವರು ಅತ್ಯಂತ ದಕ್ಷ ಮತ್ತು ಜನಪ್ರಿಯ ಕಾಂಗ್ರೆಸ್ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಬೇರೆ. ಆಳುವ ಪಕ್ಷಕ್ಕೆ ಅತ್ಯಂತ ಸುರಕ್ಷಿತ ಚುನಾವಣಾ ಕ್ಷೇತ್ರದಲ್ಲೊಂದಾದ ಈ ಕ್ಷೇತ್ರದಲ್ಲಿ ಮರು ಚುನಾವಣೆಗೆ ನಿಂತಿದ್ದರು.

ಕಮ್ಯೂನಿಸ್ಟ್ ಪ್ರತಿಸ್ಪರ್ಧಿ ಕಾಮ್ರೇಡ್ ಮಹಮ್ಮದ್ ಇಸ್ಮಾಯಿಲ್. ಉತ್ತರ ಪ್ರದೇಶದ ಕಾನ್ಪುರದ ಒಂದು ಹಳ್ಳಿಯ ಅತ್ಯಂತಬಡ ರೈತ ಕುಟುಂಬದಿಂದ ಬಂದ ಇಸ್ಮಾಯಿಲ್ '20ರ ದಶಕದಲ್ಲಿ ಜೀವನೋಪಾಯ ಅರಸಿಕೊಂಡು, ಆದರ್ಶಗಳನ್ನು ಹೊತ್ತುಕೊಂಡು ಕಲ್ಕತ್ತೆಗೆ ಬಂದವರು. ಬರುವಾಗ ಮೌಲಾನಾ ಆಝಾದರವರ, ಕಾಂಗ್ರೆಸ್ಸಿನ ಪ್ರಭಾವವಿದ್ದರೂ ಕಲ್ಕತ್ತೆಯ ಟ್ರಾಮ್ ಸಿಬ್ಬಂದಿಯ ಸಂಘಟನೆ ಮಾಡುತ್ತಾ, ನಂತರ ಇಂಜಿನಿಯರಿಂಗ್ ಕಾರ್ಮಿಕರ ರೈಲ್ವೆ ಕಾರ್ಮಿಕರ, ಕಲ್ಕತ್ತೆಯ ಸಾವಿರಾರು ಅಂಗಡಿ ಕಾರ್ಮಿಕರ ಸಂಘಟನೆ ಮಾಡುತ್ತಾ, ಅದುವರೆಗೆ ಅಸಂಘಟಿತರಾಗಿ ಮಾಲಿಕರ ಬೈಗಳ, ಛಡಿಯೇಟು ಸಹಿಸಿಕೊಂಡಿದ್ದವರನ್ನು ಸಂಘಟಿಸುತ್ತಾ ಮಾರ್ಕ್ಸ್‌ವಾದದತ್ತ ಒಲಿದವರು. (ಈಗ ಸಿ.ಐ.ಟಿ.ಯು. ಮುಖಂಡರು.)

ಆದರೂ ಇನ್ನೂ ರಾಜ್ಯದಲ್ಲೇ ಎಲ್ಲರೂ ಕೇಳಿರದ ಈ ಸ್ಪರ್ಧಿ, "ಹಳ್ಳಿಗಾಡಿನಿಂದ ಬಂದ ಈ ಟ್ರಾಮ್ ಕಂಡಕ್ಟರ್" (ಮಹಾನ್ ಬಿ.ಪಿ.ರಾಯ್ ತುಚ್ಛವಾಗಿ ಹೇಳುತ್ತಿದ್ದ ರೀತಿಯಿದು) ದೇಶದಲ್ಲೆಲ್ಲಾ ಖ್ಯಾತಿ ಪಡೆದಿರುವ ಕಾಂಗ್ರೆಸ್ ಮುಖ್ಯ ಮಂತ್ರಿಗೆ ಏನು ಸ್ಪರ್ಧೆ ನೀಡಿಯಾರು? ಕಾಂಗ್ರೆಸ್ಸಿಗರು ಅತ್ಯಂತ ನಿರಾತಂಕವಾಗಿಯೇ ಪ್ರಚಾರ ಮುಗಿಸಿದರು. ಅತ್ತ ಕಾರ್ಮಿಕರು ಪಕ್ಷದ ಕಾರ್ಯಕರ್ತರು ಇಸ್ಮಾಯಿಲ್ ಗೆಲುವಿಗಾಗಿ ಮನೆ ಮನೆಗೆ ಹೋಗಿ ಪ್ರಚಾರ ನಡೆಸಿದರು.

ಚುನಾವಣಾ ದಿನ ಬಂತು. ಮತದಾನ ನಡೆಯಿತು. ಎರಡು ದಿನಗಳ ನಂತರ ಮತ ಎಣಿಕೆ, ಮಧ್ಯಾಹ್ನದ ಸುಮಾರಿಗೆ ಒಂದು ಸುದ್ದಿ ಡಾ.ಬಿ.ಸಿ. ರಾಯ್ ಹಿಂದಿದ್ದಾರೆ. ಎಣಿಕೆ ಮುಂದುವರೆಯಿತು. ಕಾಂ.ಇಸ್ಮಾಯಿಲ್‌ರ ಲೀಡ್ ಕೆಲವೊಮ್ಮೆ ಸಾವಿರಕ್ಕೇರುತ್ತಿತ್ತು. ಕೆಲವೊಮ್ಮೆ ಮುನ್ನೂರಕ್ಕಿಳಿಯುತ್ತಿತ್ತು. ಆದರೆ ಎಂದೂ ಹಿಂದೆ ಬೀಳಲಿಲ್ಲ. ಮತ ಎಣಿಕೆಯ ಕಟ್ಟಡದ ಹೊರಗೆ ಕೆಂಬಾವುಟಗಳನ್ನು ಹಿಡಿದ ಇಸ್ಮಾಯಿಲ್ ಬೆಂಬಲಿಗರ ಮುಖದಲ್ಲಿ ಉತ್ಸಾಹದ ಕಳೆ. ಅಂತಿಮ ತೀರ್ಪಿನ ನಿರೀಕ್ಷೆ. ಕೊನೆಯ ಸುತ್ತಿನ ಮತ ಎಣಿಕೆಯಷ್ಟೇ ಉಳಿದಿತ್ತು.

ಆಗ ಈಗಿನಂತೆ ಮತ ಪತ್ರಗಳಲ್ಲಿ ಅಭ್ಯರ್ಥಿಗಳ ಹೆಸರುಗಳಾಗಲೀ, ಚಿಹ್ನೆಗಳಾಗಲೀ ಇರಲಿಲ್ಲ. ಒಬ್ಬೊಬ್ಬ ಅಭ್ಯರ್ಥಿಗೆ ಒಂದೊಂದು ಪೆಟ್ಟಿಗೆ. ಮತ ಪತ್ರವನ್ನು ನಿಮ್ಮ ಆಯ್ಕೆಯ ಅಭ್ಯರ್ಥಿಯ ಪೆಟ್ಟಿಗೆಗೆ ಹಾಕಬೇಕು. ನಂತರ ಅವನ್ನು ಅಭ್ಯರ್ಥಿವಾರಾಗಿ ಪ್ರತ್ಯೇಕವಾಗಿ ಟ್ರೇಗಳಲ್ಲಿ ಕಟ್ಟಿಹಾಕಿ ಎಣಿಕೆ ಮಾಡಲಾಗುತ್ತಿತ್ತು.

ಇನ್ನೇನು ಅಂತಿಮ ಸುತ್ತಿನ ಮತ ಎಣಿಕೆ ನಡೆಯಬೇಕು. ಇಸ್ಮಾಯಿಲ್ 250 ಮತಗಳಿಂದ ಮುಂದಿದ್ದರು. ಇದ್ದಕ್ಕಿದ್ದಂತೆ ವಿದ್ಯುತ್ ದೀಪಗಳು ಆರಿ ಹೋದವು. ಎಲ್ಲೆಲ್ಲೂ ಗಲಭೆ. ಮತ ಪತ್ರಗಳಿಂದ ತುಂಬಿದ್ದ ಕೆಲವು ಟ್ರೇಗಳು ಅದಲು ಬದಲಾದ ಸದ್ದು.

ಅಂತಿಮ ಸುತ್ತು ಮುಗಿದಾಗ ಇಬ್ಬರೂ ಅಭ್ಯರ್ಥಿಗಳಿಗೆ ಸುಮಾರಾಗಿ ಸಮ-ಸಮ ಮತ ಎಂದು ಚುನಾವಣಾ ಅಧಿಕಾರಿ ಘೋಷಿಸಿದರು. ಆದರೆ ಇದ್ದಕ್ಕಿದ್ದಂತೆ ಎಲ್ಲಿಂದಲೋ ಅಂಚೆಯಿಂದ ಬಂದ ಮತ ಪತ್ರಗಳ ಒಂದು ಚೀಲ ಹಾಜರಾಗಿತ್ತು. ಇದು ಚುನಾವಣಾ ಡ್ಯೂಟಿ ಮೇಲಿದ್ದ ಪೋಲೀಸ್ ಸಿಬ್ಬಂದಿಯ ಮತಗಳಂತೆ ಈ ಅಂಚೆ ಮತ ಪತ್ರಗಳ ಸಂಗ್ರಹ ಆಗಂತೂ ಪೂರ್ತಿಯಾಗಿ ಸರಕಾರದ ಕೈಯಲ್ಲಿದ್ದ ವ್ಯವಸ್ಥೆ. ಆದರೆ ಎಣಿಕೆಯುಷ್ಟೇ ಉಳಿದಿವೆ ಎಂದಾಗ ಕಮ್ಯುನಿಸ್ಟ್ ಅಭ್ಯರ್ಥಿಯ ಚುನಾವಣಾ ಏಜೆಂಟ್ ಪ್ರತಿಭಟಿಸಿದರು. ಚುನಾವಣಾಧಿಕಾರಿ ಅದನ್ನು ಬದಿಗೆ ತಳ್ಳಿದರು. ಎಣಿಕೆ ಮುಗಿಯಿತು. ಕಾಂಗ್ರೆಸ್ಸಿನ ಅತ್ಯಂತ ಸುರಕ್ಷಿತ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ಸಿನ ಜನಪ್ರಿಯ ಮುಖ್ಯಮಂತ್ರಿ, ಮಹಾನ್ ವ್ಯಕ್ತಿ, ಡಾ.ಬಿ.ಸಿ.ರಾಯ್ ಉತ್ತರ ಪ್ರದೇಶದ ಹಳ್ಳಿಗಾಡಿನಿಂದ ಬಂದ ಟ್ರಾಮ್ ಕಂಡಕ್ಟರ್ ಮತ್ತು ಕಮ್ಯೂನಿಸ್ಟ್ ಅಭ್ಯರ್ಥಿ ಮಹಮ್ಮದ್ ಇಸ್ಮಾಯಿಲ್‌ಗಿಂತ 500 ಅಂಚೆ ಮತ ಪತ್ರಗಳನ್ನು ಹೆಚ್ಚು ಪಡೆದು ಚುನಾಯಿತರಾದರು !

ಡಾ. ಬಿ.ಸಿ.ರಾಯ್ ಸ್ಪರ್ಧೆಯಲ್ಲಿ ಹಿಂದೆ ಬಿದ್ದಿದ್ದ ಸುದ್ದಿ ಬಂದ ಕೂಡಲೇ ದಿಲ್ಲಿ ಮತ್ತು ಕಲ್ಕತ್ತಾಗಳ ನಡುವೆ ಸಾಲು-ಸಾಲು ತಂತಿ ಸಂದೇಶಗಳ ವಿನಿಮಯ ನಡೆದುವಂತೆ. ಒಬ್ಬ ಪ್ರಸಿದ್ಧ ಕಾಂಗ್ರೆಸ್ ಮುಖ್ಯಮಂತ್ರಿ ಕಮ್ಯುನಿಸ್ಟ್ ಅಭ್ಯರ್ಥಿಯೊಬ್ಬನಿಗೆ ಸೋತರೆ ಅದರ ಪರಿಣಾಮನೇನಾಗಬಹುದು ಎಂಬುದರ ಬಗ್ಗೆ ಕೂಲಂಕುಷ ವಿಚಾರ ವಿಮರ್ಶೆ ನಡೆಯಿತಂತೆ, ಹಾಗಾಗಬಾರದೆಂದೂ ನಿರ್ಧಾರವಾಯಿತಂತೆ. ಅಂಚೆ ಮತ ಪತ್ರಗಳ ಚೀಲ ಹಾಜರಾಗುವ ಮೊದಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪೋಲೀಸ್ ಕಮಿಶನರ್ ಹಾಗೂ ಚುನಾವಣಾಧಿಕಾರಿಗಳ ತುರ್ತು ಸಭೆಯೊಂದು ಕೂಡ ನಡೆಯಿತಂತೆ.

ಇದರ ಸತ್ಯಾಂಶವೇನೇ ಇರಲಿ, ಆದರೆ ಒಂದು ಸಂಗತಿಯಂತೂ ನಿಜ. ಕಾಂಗ್ರೆಸ್‌ನ ಪ್ರತಿಷ್ಠೆ ಇನ್ನೂ ಮಾಸಿರದ, ಆ ಪಕ್ಷದ ಬಗ್ಗೆ ಇನ್ನೂ ಬಲವಾದ ಭ್ರಮೆಗಳಿದ್ದ ಆ ಕಾಲದಲ್ಲೂ ಬಹಳಷ್ಟು ಮಂದಿಗೆ ಕಲ್ಕತ್ತೆಯ ಬೋವ್ ಬಝಾರ್ ಕ್ಷೇತ್ರದ ಫಲಿತಾಂಶದ ಬಗ್ಗೆ ತೀವ್ರ ಸಂದೇಹವಿತ್ತು. ಕಾಂ. ಇಸ್ಮಾಯಿಲ್‌ರಿಂದ ಈ ಚುನಾವಣಾ ವಿಜಯವನ್ನು ಕಸಿದುಕೊಂಡು ಡಾ.ಬಿ.ಸಿ. ರಾಯ್‌ಗೆ ಅರ್ಪಿಸಲಾಯಿತು. ಎಂಬ ಭಾವನೆ ವ್ಯಾಪಕವಾಗಿತ್ತು.

(ಆಧಾರ-'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಡಾ. ಅಶೋಕ ಮಿತ್ರಾ ಲೇಖನ)

ಮೊಳಕಾಲ್ಮೂರಿನಲ್ಲಿ ಬೆಳೆಯುತ್ತಿರುವ ಸಂಘಟನೆಗಳು

ಚಿತ್ರದುರ್ಗ ಜಿಲ್ಲಾ ಮೊಳಕಾಲ್ಮೂರು ತಾಲ್ಲೂಕಿನ ರೈತರು ಮತ್ತು ಡಿ.ವೈ ಎಫ್ ಐ. ಕಾರ್ಯಕರ್ತರು 26.6.87 ರಂದು ಪ್ರತಿಭಟನಾ ಮೆರವಣಿಗೆಯೊಂದನ್ನು ಹೊರಡಿಸಿ ರಾಜ್ಯ ಸರ್ಕಾರವು ಹೆಚ್ಚಿಸಿರುವ ವಿದ್ಯುತ್ ದರಗಳನ್ನು ಕೂಡಲೇ ಕಡಿಮೆ ಮಾಡಲು ಒತ್ತಾಯಿಸಿದರು. ಎ.ಜಿ.ಗಂಗಾಧರ ಮತ್ತು ಡಿ.ಎಂ.ಮಲಿಯಪ್ಪ ಮೆರವಣಿಗೆಯ ನೇತೃತ್ವವಹಿಸಿದ್ದರು. ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಹರಿಹರದ ಸಿ.ಐ.ಟಿ.ಯು ಮುಖಂಡ ನಿತ್ಯಾನಂದಸ್ವಾಮಿ ಜನತಾ ಸರ್ಕಾರದ ಜನ ವಿರೋಧಿ ಕ್ರಮಗಳ ವಿರುದ್ಧ ಚಳುವಳಿಯನ್ನು ತೀವ್ರಗೊಳಿಸಲು ಕರೆ ನೀಡಿದರು.

ಮೊಳಕಾಲೂರು ತಾಲ್ಲೂಕಿನ ರೈತರು ಇತ್ತೀಚೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಆಡಿಯಲ್ಲಿ ಸಂಘಟಿತರಾಗಲು ಆರಂಭಿಸಿದ್ದಾರೆ. ಕಳೆದ ಸೆಪ್ಟಂಬರ್ ತಿಂಗಳಲ್ಲಿ ನಡೆದ ರೈತರ "ವಿಧಾನ ಸೌಧ ಚಲೋ" ಚಳುವಳಿಯಲ್ಲಿ ಈ ತಾಲ್ಲೂಕಿನ ಬೊಮ್ಮದೇವರಹಳ್ಳಿ, ಒಬಾಳಾಪುರ, ರಾಂಪುರ ಮತ್ತು ಹನುಮಾಪುರ ಗ್ರಾಮಗಳಿಂದ ಒಟ್ಟು 82 ರೈತರು ಭಾಗವಹಿಸಿದ್ದರು. ರಂಗಯ್ಯನ ದುರ್ಗ ನೀರಾವರಿ ಯೋಜನೆ ಕಾರ್ಯಗತಗೊಳ್ಳಬೇಕೆಂಬುದೇ ಈ ಪ್ರದೇಶದ ರೈತರ ಪ್ರಮುಖ ಬೇಡಿಕೆಯಾಗಿದೆ.

ಈ ತಾಲ್ಲೂಕಿನ ವಿದ್ಯಾರ್ಥಿ ಯುವ ಜನರ ಮಧ್ಯದಲ್ಲಿ ಎಸ್. ಎಫ್. ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳು ಸಹ ಜನಪ್ರಿಯಗೊಳ್ಳುತ್ತಿವೆ. ರಾಂಪುರದಲ್ಲಿ ಒಂದು ಸರ್ಕಾರಿ ಹಾಸ್ಟೆಲ್ ಸ್ಥಾಪನೆಯಾಗಬೇಕೆಂದು ಒತ್ತಾಯಿಸಿ ಇಲ್ಲಿಯ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ನಡೆಸಿದ ಹೋರಾಟ ಈಗ ಸಫಲವಾಗಿದೆ. ರಾಂಪುರದ ಸರಹದ್ದಿನ ಸರ್ಕಾರಿ ಭೂಮಿಯಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ಕೃಷಿ ಕೂಲಿಕಾರರನ್ನು ಸಂಘಟಿಸಿ ಸದರಿ ನಿವೇಶನಗಳನ್ನು ಕ್ರಮಬದ್ಧಗೊಳಿಸಲು ಸ್ಥಳೀಯ ಡಿ.ವೈ.ಎಫ್.ಐ. ಹೋರಾಟ ನಡೆಸಿದೆ. ಕುಡಿಯುವ ನೀರಿಗಾಗಿ, ಗ್ರಾಮಾಂತರ ಬಸ್ ಸೌಕರ್ಯಕ್ಕಾಗಿ ಹೋರಾಟಗಳನ್ನು ನಡೆಸಿರುವ ಡಿ.ವೈ.ಎಫ್.ಐ. ವೃದ್ಧಾಪ್ಯ ವೇತನ, ವಿಧವಾ ವೇತನ, ಹಸಿರು ಕಾರ್ಡು ಇತ್ಯಾದಿಗಳನ್ನು ದುರ್ಬಲವರ್ಗದ ಜನರಿಗೆ ಒದಗಿಸಲು ನೆರವು ನೀಡುವ ಮೂಲಕ ಈ ಪ್ರದೇಶಗಳಲ್ಲಿ ಜನ ಮೆಚ್ಚುಗೆ ಪಡೆಯುತ್ತಿದೆ. ಇಲ್ಲಿಯ ಯುವ ಕಾರ್ಯಕರ್ತರು ಪೋಲೀಸ್ ದೌರ್ಜನ್ಯ ಹಾಗೂ ಕಾಂಗ್ರೆ, ಜನತಾ ಪಟ್ಟಭದ್ರ ಹಿತಾಸಕ್ತಿಗಳ ದಬ್ಬಾಳಿಕೆಯನ್ನು ಎದುರಿಸಿ ಕೆಲಸ ಮಾಡುತ್ತಿದ್ದಾರೆ.

ಭಾರತದ ರೈಲ್ವೆಯ ವರ್ಗ ಲಕ್ಷಣ

(2ನೇ ಪುಟದಿಂದ)

90ರಷ್ಟು. ಸಾರಿಗೆ ಗಾಡಿಗಳ ಸಂಖ್ಯೆ ಶೇ.86ರಷ್ಟು. ರೈಲು ನೌಕರರ ಸಂಖ್ಯೆ ಶೇ.97ರಷ್ಟು ಹೆಚ್ಚಾಗಿದ್ದು,-ಪ್ರಯಾಣಿಕರ ಸಂಖ್ಯೆ ಶೇ.185 ರಷ್ಟು ಮತ್ತು ಸರಕು ಸಾಮಗ್ರಿಗಳ ಸಾಗಾಣಿಕೆಯು ಶೇ.175ರಷ್ಟು ಹೆಚ್ಚಾಗಿರುವುದನ್ನು ಗಮನಿಸಬೇಕು. ಕಡಿಮೆ ರೈಲು ದಾರಿ ಕಡಿಮೆ ರೈಲು ಯಂತ್ರ. ಕಡಿಮೆ ರೈಲು ಡಬ್ಬಿ. ಕಡಿಮೆ ರೈಲು ನೌಕರರಿಂದ ಹೆಚ್ಚು ಹೆಚ್ಚು ಪ್ರಯಾಣಿಕರನ್ನೂ ಸರಕು ಸಾಮಗ್ರಿಗಳನ್ನೂ ಸಾಗಿಸುವ ಅತ್ಯಂತ ಶೋಚನೀಯಬಂಡವಾಳಶಾಹಿ ವಿಧಾನವನ್ನು ರೈಲ್ವೆ ಖಾತೆ ಅನುಸರಿಸುತ್ತಿದೆ. ಮೂರನೇ ವರ್ಗದ ಪ್ರಯಾಣಿಕರ-ಸಾಮಾನ್ಯರೈಲು ಸಂಚಾರಗಳು ತೀವ್ರ ಅನಾನುಕೂಲತೆಗಳಿಂದ ಅಸಹನೀಯವಾಗುತ್ತಿದೆ. ನಿಲ್ಲಲಿಕ್ಕೂಪ್ರಯಾಣ ಕಾಲದಲ್ಲಿ ಸ್ಥಳವಿರುವುದಿಲ್ಲ. ರೈಲು ಗಾಡಿಯ ಮೇಲ್ಭಾಗದಲ್ಲಿ ಏರಿಕೊಂಡು ಪ್ರಯಾಣ ಮಾಡುತ್ತಿರುವುದನ್ನೂ ನಾವು ನೋಡುತ್ತಿದ್ದೇವೆ! ಮೇವು, ಹಾಲು ಆಹಾರ ಧಾನ್ಯಗಳು ಇತ್ಯಾದಿ ಜೀವನಾವಶ್ಯಕ ವಸ್ತುಗಳ ಸಾಗಾಣಿಕೆಯು ಪ್ರಾಥಮಿಕ ಅನು ಕಲತೆಗಳೂ ಇಲ್ಲದಾಗಿ ಭಾರೀ ನಷ್ಟ ಅನುಭವಿಸುತ್ತಿವೆ.ಸಾಗಾಣಿಕೆಯ ಅವಧಿಯಲ್ಲಿ ಹಾಳಾಗುತ್ತಿವೆ. ಎಕನಾಮಿಕ್ಸ್ ಟೈಮ್ಸ್ ದಿ. 27.2.47ರ ವರದಿಯಂತೆ, 1972-86ರ ಅವಧಿಯಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಶೇ. 62ರಷ್ಟು ಮತ್ತು ಸಾರಿಗೆ ಸಾಗಾಣಿಕೆ ಶೇ. 109 ರಷ್ಟು ಹೆಚ್ಚಾಗಿದ್ದು, ರೈಲ್ವೆ ನೌಕರರ ಸಂಖ್ಯೆಯು ಕೇವಲ ಶೇ. 17ರಷ್ಟು ಹೆಚ್ಚಾಗಿವೆ ಎಂದು ತಿಳಿದು ಬಂದಿದೆ. ಆದರೂ ರೈಲ್ವೆ ನೌಕರರನ್ನೂ ಕಾರ್ಯದಕ್ಷತೆ ಇಲ್ಲದವರು ಎಂದು ಟೀಕಿಸಲಾಗುತ್ತಿದೆ!

21ನೇ ಶತಮಾನದತ್ತ ಭಾರತ ರೈಲ್ವೆ:

1985ರಿಂದ 2000 ವರ್ಷದವರೆಗೆ 15 ವರ್ಷಗಳ ದೀರ್ಘಾವಧಿ ಯೋಜನೆಯೊಂದನ್ನು ರೈಲ್ವೆ ಅಭಿವೃದ್ಧಿಗೆ ರೂಪಿಸಲಾಗಿದೆ. 21ನೇ ಶತಮಾನಕ್ಕೆ ರೈಲ್ವೆ ಉದ್ಯಮವು ಪ್ರವೇಶ ಮಾಡಲು ಪೂರ್ವ ಸನ್ನಾಹವಾಗಿ ಈ ಈ ಯೋಜನೆಯಂತೆ. ಪ್ರಯಾಣಿಕರ ಸಂಖ್ಯೆಯು ವರ್ಷಕ್ಕೆ 36500 ಲಕ್ಷದಿಂದ 42500ಲಕ್ಷಕ್ಕೆ ಏರಲಿದೆ. ಸರಕು ಸಾಗಾಣಿಕೆಯು 286 ಮಿ.ಟನ್‌ಗಳಿಂದ 450 ಮಿ,ಟನ್‌ಗಳಿಗೆ ಏರಲಿದೆ. ರೂ.23150 ಕೋಟಿಯಷ್ಟು ಹೊಸ ಬಂಡವಾಳವನ್ನು ಹೂಡಲಾಗುವುದು ರೂ.21 900 ಕೋಟಿಯಷ್ಟು ಹಳೆಯ ರೈಲು ದಾರಿ ಯಂತ್ರ ಗಾಡಿ, ಇತ್ಯಾದಿಗಳನ್ನು ಬದಲಾಯಿಸಲು ವಿನಿಯೋಗಿಸಲಾಗುವುದು. ಈ ಯೋಜನೆಯಲ್ಲಿ ಬೃಹತ್ ಪ್ರಮಾಣದಆಧುನೀಕರಣ ಕಂಪ್ಯೂಟರ್‌ಗಳ ಬಳಕೆ, ಇನ್ನಷ್ಟು ವಿದ್ಯುತ್ ಕರಣ ಮತ್ತು ಡಿಸೈಲ್ ಕರಣ ನಡೆಯಯಲಿದೆ.

ಅತ್ಯಾಧುನಿಕ ತಂತ್ರಜ್ಞಾನವನ್ನು ರೈಲ್ವೆಯಲ್ಲಿ ಬಳಸುವ ಮೂಲಕ,ಲಕ್ಷಾಂತರ ಸಂಖ್ಯೆಯಲ್ಲಿ ರೈಲ್ವೆ ಕಾರ್ಮಿಕರು ಮತ್ತು ಅದಕ್ಕೆ ಸಂಬಂಧಿಸಿದ ಇತರ ಕೈಗಾರಿಕೆಗಳ ಕಾರ್ಮಿಕರು ತಮ್ಮ ಕೆಲಸ ಕಳೆದುಕೊಳ್ಳಲಿರುವರು.

ವಿಶ್ವಬ್ಯಾಂಕ್ ಹಾಗೂ ಪಶ್ಚಿಮ ಯುರೋಪ್, ಅಮೇರಿಕ, ಜಪಾನ್ ದೇಶಗಳ ಬಹುರಾಷ್ಟ್ರೀಯ ಸಂಸ್ಥೆಗಳು ಭಾರತದ ರೈಲ್ವೆ ಉದ್ಯಮದಲ್ಲಿ ಸಾಲ, ಸಹಾಯ, ತಾಂತ್ರಿಕ ನೆರವು ರೂಪಗಳಲ್ಲಿ ಭಾರೀ ಪ್ರಮಾಣದಲ್ಲಿ ಪ್ರವೇಶಿಸಲಿರುವುದು. ರೈಲ್ವೆ ಉದ್ಯಮದಲ್ಲಿ ಸ್ವಾವಲಂಬನೆಯ ಗುರಿಯು ದೂರ ಉಳಿಯುವುದು. ಈ ವಿದೇಶಿ ಶಕ್ತಿಗಳು ರೈಲ್ವೆ ಖಾತೆಯಲ್ಲಿ ನೌಕರರ ಸಂಖ್ಯೆಯನ್ನು ಅವರ ಕಲ್ಯಾಣ ಕಾರ್ಯಗಳ ವೆಚ್ಚವನ್ನು ಖಚಿತಗೊಳಿಸಲು, ಗಣನೀಯವಾಗಿ ಕಡಿಮೆಗೊಳಿಸಲು, ಪ್ರಯಾಣಿಕರ ಮತ್ತು ಸರಕು ಸಾಗಣಿಕೆಯ ದರಗಳನ್ನು ಇನ್ನಷ್ಟು ಏರಿಸಲು, ದುರ್ಬಲ ವರ್ಗದ ಪ್ರಯಾಣಿಕರಿಗೆ,ಜೀವನಾವಶ್ಯಕ ವಸ್ತುಗಳ ಸಾಗಣಿಕೆಗೆ ನೀಡುತ್ತಿರುವ ರಿಯಾಯಿತಿಗಳನ್ನು (ಸದ್ಯ ಸುಮಾರು ರೂ. 1,200 ಕೋಟಿ) ರದ್ದುಗೊಳಿಸಲು, ಹಿಂದುಳಿದ ಪ್ರದೇಶಗಳಲ್ಲಿ ಹಲವು ರೈಲು ಸಂಚಾರಗಳನ್ನು 'ಲಾಭದಾಯಕವಲ್ಲ' ಎಂಬ ನೆಪದಿಂದ ರದ್ದುಗೊಳಿಸಲು ಒತ್ತಾಯಿಸುತ್ತಿವೆ.

21ನೇ ಶತಮಾನಕ್ಕೆ ಹೇಗಾದರೂ ನೆಗೆಯಬೇಕೆಂದು ಉತ್ಸಾಹಿತರಾದ ಪ್ರಧಾನಿ ರಾಜೀವ್‌ಗಾಂಧಿ ತನ್ನ ನೂತನ ಆರ್ಥಿಕ ನೀತಿಯಲ್ಲಿ ಇಂತಹ ರಾಷ್ಟ್ರ ವಿರೋಧಿ ಸ್ವಾತಂತ್ರ್ಯ, ಸ್ವಾವಲಂಬನೆ, ಉದ್ಯೋಗಾವಕಾಶಕ್ಕೆ ಅಪಾಯಕಾರಿ ಕ್ರಮಗಳಿಗೆ ಶರತ್ತುಗಳಿಗೆ ಒಪ್ಪಿಗೆ ನೀಡುತ್ತಿದ್ದಾರೆ! ಭಾರತದ ದುಡಿಯುವ ಜನ ಕೋಟಿ ಇಂತಹ ಧೋರಣೆಗಳ ಕುರಿತು ಎಚ್ಚರವಹಿಸಬೇಕು. ಸಂಘಟಿತರಾಗಿ ಪ್ರತಿಭಟಿಸಬೇಕು. ರಷ್ಯಾ,ಚೈನಾ ಮೊದಲಾದ ಸಮಾಜವಾದಿ ದೇಶಗಳಲ್ಲಿ ರೈಲು ಪ್ರಯಾಣ ಜನಸಾಮಾನ್ಯರಿಗೆ ಅತ್ಯಂತ ಅಗ್ಗವೂ ಸುಖದಾಯಕವೂ ಆಗಿರುವುದನ್ನು ನೆನಪಿಸಿಕೊಳ್ಳಬೇಕು. ಭಾರತದ ರೈಲ್ವೆಯೂ ಜನಪರವಾಗಿ, ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ, ಸ್ವಾವಲಂಬನೆಗಾಗಿ ಬೆಳೆಯುವಂತೆ ಒತ್ತಾಯಿಸಬೇಕು. ○

ಕಾರ್ಮಿಕರಿಗೆ ಅಧ್ಯಯನ ಶಿಬಿರ

ಟಿ.ಟಿ ಕೆ. ಫ್ಯಾಕ್ಟರಿಯ ಬಳಿ ದಿ : 12-7-87 ರ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಇಡೀ ದಿವಸ ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ 'ವಿಶ್ವದ ಕಾರ್ಮಿಕ ವರ್ಗದ ಚಳುವಳಿಯ ಕುರಿತು ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಪಿ.ರಾಮರಾವ್ ರವರಿಂದ ಉಪನ್ಯಾಸ ○

ರಾಷ್ಟ್ರಪತಿ ಚುನಾವಣೆ - ಮೂರು ನಿಲುವುಗಳು

(5ನೇ ಪುಟದಿಂದ)

ಕಾಂಗ್ರೆಯನ್ನು ಸೋಲಿಸಲು ಅಧಿಕಾರವನ್ನು ಗಳಿಸಲು ಇಚ್ಛಿಸುವ ಈ ಪಕ್ಷಗಳೆಲ್ಲಾ ಜನರನ್ನು ಸಂಘಟಿಸಿ ಕಾಂಗ್ರೆನ ಆರ್ಥಿಕ ನೀತಿಗೆ ಪರ್ಯಾಯವಾದ ನೀತಿಯನ್ನು ಪ್ರಚಾರ ಮಾಡಿ ನೇರ ಮಾರ್ಗದಲ್ಲಿ ಅಧಿಕಾರಕ್ಕೆ ಬರುವ ಪ್ರಯತ್ನ ಮಾಡದೆ ಸಂವಿಧಾನವನ್ನು ಅಸ್ಥಿರಗೊಳಿಸುವ ಪ್ರಯತ್ನ ಏಕೆ ಪಡುತ್ತವೆ?

ಆದುದರಿಂದಲೇ ಇಡೀ ಪ್ರಶ್ನೆ ಜನತೆ ಬಳಿ ಸಾರಿ ಜನ ಮನದಲ್ಲಿ ಬೇರೂರಿರುವ ಕಾಂಗ್ರೆಯನ್ನು ಅಲುಗಾಡಿಸುವುದೇ ಅಥವಾ ಅರಮನೆ ಪಿತೂರಿಗಳ ಮೂಲಕ ಹಿಂಬಾಗಿಲಿನಿಂದ ಕಾಂಗ್ರೆಸ್ ಅನ್ನು ಅಧಿಕಾರದಿಂದ ತಳ್ಳುವುದೇ ಎಂಬ ಪ್ರಶ್ನೆಗೆ ಇಳಿಯುತ್ತದೆ.

ಆದ್ದರಿಂದಲೇ ಸಿ.ಪಿ.ಐ.(ಎಂ) ಸ್ಪಷ್ಟವಾಗಿ ಸಂಸತ್ತಿನ ಅಧಿಕಾರವೇ ನಮ್ಮ ದೇಶದಲ್ಲಿ ಸರ್ವೋಚ್ಚ ಎಂದು ಘೋಷಿಸಿದೆ. ಈ ಸರ್ವೋಚ್ಚ ಲೋಕಸಭೆಯ ಮೂಲಕ ಅಧಿಕಾರಕ್ಕೆ ಬರಬೇಕು. ಅದೂ ಪಕ್ಷಾಂತರಗಳಿಂದಲ್ಲ ತತ್ವನಿಷ್ಠ ರಾಜಕೀಯಕ್ಕಾಗಿ ದೊರೆಯುವ ಬೆಂಬಲದಿಂದ. ಆದುದರಿಂದ ಪಕ್ಷ "ಯಾರು ಸಂಸತ್‌ನ ಸರ್ವೋಚ್ಚತೆಯನ್ನು ರಕ್ಷಿಸಲು ಇಚ್ಛಿಸುತ್ತಾರೋ, ಪ್ರಧಾನಿ ಹಾಗೂ ಅಧ್ಯಕ್ಷರ ಎರಡು ಪದವಿಗಳು ಸಂಸದೀಯ ವ್ಯವಸ್ಥೆಯನ್ನು ಬುಡಮೇಲು ಮಾಡಲು ಉಪಯೋಗಿಸ ಬಾರದೆನ್ನುತ್ತಾರೋ ಅವರೆಲ್ಲರೂ ವಿರೋಧ ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕೆಂದು ಕೋರುತ್ತೇವೆ." ಎಂದು ಘೋಷಿಸಿದೆ.

ಕಾಂಗ್ರೆಸ್ ಪಕ್ಷದವರನ್ನೇ ಒಬ್ಬರನ್ನು ವಿರೋಧ ಪಕ್ಷದ ಅಭ್ಯರ್ಥಿಯಾಗಿ ನಿಲ್ಲಿಸಿ ಕಾಂಗ್ರೆಸ್‌ನ ಸಂದರ್ಭ ಸಾಧಕರ ಮತಗಳನ್ನು ಪಡೆದು ಚೆಲ್ಲಾಟವಾಡುವ ಯೋಚನೆ ಮಾಡುವ ಬದಲು ಪಕ್ಷ ಹೇಳುತ್ತದೆ "ಸಂವಿಧಾನವನ್ನು ರಕ್ಷಿಸುವುದರಲ್ಲಿ ಆಸಕ್ತಿಯಿರುವ ಕಾಂಗ್ರೆಸ್(ಐ)ಎಂ.ಪಿ.ಗಳನ್ನು ಕೂಡ [ವಿರೋಧ ಪಕ್ಷದ ಅಭ್ಯರ್ಥಿಗೆ ಮತ ನೀಡಿ ಎಂಬ ಮನವಿಯಿಂದ] ಹೊರತುಪಡಿಸುವುದಿಲ್ಲ. ಏಕೆಂದರೆ ಸಂವಿಧಾನವನ್ನು ರಕ್ಷಿಸುವುದರಲ್ಲಿ ವಿರೋಧ ಪಕ್ಷದ ಎಂ.ಪಿ.,ಎಂ.ಎಲ್.ಎ.ಗಳಿಗಿರುವಷ್ಟೇ ಆಸಕ್ತಿ ಅವರಿಗೂ ಇದೆ" ಆದುದರಿಂದ ಕಾಂಗ್ರೆಪಕ್ಷದ ಸದಸ್ಯರೊಬ್ಬರನ್ನು (ಜೇಲ್‌ಸಿಂಗ್‌ರನ್ನು) ತಮ್ಮ ಕಡೆಗೆ ಪಕ್ಷಾಂತರ ಮಾಡಿಸಿಕೊಂಡು ಪಕ್ಷಾಂತರಿಗಳ ಮತ ಪಡೆಯುವ ಬದಲು, ಸಂವಿಧಾನ ರಕ್ಷಣೆ ಬೇಕೋ ಸಂವಿಧಾನವನ್ನು ಬುಡಮೇಲು ಮಾಡುವುದು ಬೇಕೋ ಎಂಬ ತತ್ವದ ಮೇಲೆ ರಾಜಕೀಯವಾಗಿ ಕಾಂಗ್ರೆ ಪಕ್ಷವನ್ನು ದುರ್ಬಲಗೊಳಿಸೋಣ ಎಂಬುದು ಪಕ್ಷದ ನೀತಿ ಬದ್ಧ ಸೂತ್ರ ○

ಮಂಗಳೂರು ಬೀಡಿ ಕೆಲಸಗಾರರ ಸಂಘದ ಮಹಾಸಭೆ

ಮಂಗಳೂರು ಬೀಡಿ ಕೆಲಸಗಾರರ ಸಂಘದ 23ನೇ ವಾರ್ಷಿಕ ಮಹಾಸಭೆಯು ಮಂಗಳೂರು ಟೌನ್ ಹಾಲಿನಲ್ಲಿ ಸಂಘದ ಅಧ್ಯಕ್ಷರಾದ ಕಾ.ಲೋಕಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ತಾ.21.6.87ರಂದು ಸೇರಿತ್ತು.

ಪ್ರಾರಂಭದಲ್ಲಿ ಜೆ. ವೀರಪ್ಪನವರು ಸಭಿಕರನ್ನು ಸ್ವಾಗತಿಸಿದರು. ಸಂಘದ ಜೊತೆ ಕಾರ್ಯದರ್ಶಿ ವಾಸುದೇವ ಸಾಲಿಯಾನ್ ಕಾರ್ಯ ಚಟುವಟಿಕೆಯ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಕಮಲಾಕ್ಷ ಬಂಗೇರರವರು ಗತ ವರ್ಷದ ಲೆಕ್ಕ ಪತ್ರವನ್ನು ಮಂಡಿಸಿದರು. ಮಹಾ ಸಭೆಯು ವರದಿ ಮತ್ತು ಲೆಕ್ಕ ಪತ್ರವನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಸಭೆಯಲ್ಲಿ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಬೀಡಿ ಕಾರ್ಮಿಕರಿಗೆ ಶೇಕಡ 20 ರಷ್ಟು ಬೋನಸ್ಸು, ಕೂಡಲೇ ಮಾಲೀಕರು ಕೊಡಬೇಕೆಂಬ ನಿರ್ಣಯವನ್ನು ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಮಹಾ ಸಭೆಯನ್ನುದ್ದೇಶಿಸಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ಕಾರ್ಯದರ್ಶಿ ಕಾ.ಯು.ಬಿ. ಲೋಕಯ್ಯನವರು ಮಾತನಾಡುತ್ತಾ, ಬೀಡಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಡುವುದರೊಂದಿಗೆ ಸಾಮಾಜಿಕವಾಗಿ ನಡೆಯುವಅನ್ಯಾಯಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ ಎಂದರು. ರಾಜ್ಯಮತ್ತು ಕೇಂದ್ರಸರಕಾರವುಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ ಮಾಡಿರುವುದನ್ನು ಖಂಡಿಸಿದರು.

ಮಹಾ ಸಭೆಗೆ ಶುಭಕೋರಿ ಆಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘ(ಸಿಐಟಿಯು)ದಕಾರ್ಯದರ್ಶಿ ಜಗದೀಶ ಸುವರ್ಣ,ಮೂಡಬಿದ್ರೆ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕುಮಾರಿ ರಮಣಿ, ಕುಪ್ಪೆಪದವು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ವಾಸುದೇವ ಆಚಾರಿ,ಕ್ಯಾಶ್ಯೂ ಎಂಡ್ ಎಲ್ಯಾಡ್ ವರ್ಕರ್ಸ್ ಸಂಘದ ಕಾರ್ಯದರ್ಶಿ ಕಮಲಾಕ್ಷ ಬಂಗೇರ, ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾ. ಬಾಬುದೇವಾಡಿಗ ಇವರುಗಳು ಮಾತನಾಡಿದರು.

ಪದಾಧಿಕಾರಿಗಳು

ಮಹಾಸಭೆಯಲ್ಲಿ ಮುಂದಿನ ವರ್ಷಕ್ಕೆ ಕಾ.ಲೋಕಯ್ಯ ಶೆಟ್ಟಿ ಅಧ್ಯಕ್ಷರಾಗಿಯೂ ಕಾ.ಕೃಷ್ಣ ಶೆಟ್ಟಿ, ಕಾ.ಆನಂದ ಕಾ.ಶ್ರೀಮತಿ ಜಯಂತಿ ಉಪಾಧ್ಯಕ್ಷರುಗಳಾಗಿಯೂ, ಕಾ.ಜೆ. ವೀರಪ್ಪ ಕಾರ್ಯದರ್ಶಿಯಾಗಿ, ವಾಸುದೇವ ಸಾಲಿಯಾನ್, ರಾಮಪ್ಪ, ಶ್ರೀಮತಿ ದೇವಕಿ ಜೊತೆ ಕಾರ್ಯದರ್ಶಿಗಳಾಗಿಯೂ, ಕಮಲಾಕ್ಷ ಬಂಗೇರ ಕೋಶಾಧಿಕಾರಿಯಾಗಿಯೂ ಹಾಗೂ 27 ಮಂದಿ ಇರುವ ಕಾರ್ಯಕಾರಿ ಸಮಿತಿಯನ್ನೂ ಮಹಾ ಸಭೆಯು ಸರ್ವಾನುಮತದಿಂದ ಆರಿಸಿತು. ●

ಒರಿಸ್ಸಾದ ಕಾಲಾಹಂಡಿಯಲ್ಲಿ ಬರ – ಪಕ್ಷದ ಪರಿಹಾರ ಕೇಂದ್ರ

ಒರಿಸ್ಸಾ ರಾಜ್ಯದ 'ಕಾಲಾ ಹಂಡಿ' ಮತ್ತು ಕೋರಾಪುಟ್ ಜಿಲ್ಲೆಗಳು ದೇಶದಲ್ಲೇ ಅತ್ಯಂತ ಹಿಂದುಳಿದ ಪ್ರದೇಶ. ಬಹು ಸಂಖ್ಯಾತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರೇ ಉಳ್ಳ ಇಲ್ಲಿ ಶೇಕಡಾ 85 ರಷ್ಟು ಜನ ಭೂಹೀನರು. ದಾರುಣ ಬಡತನದಲ್ಲಿರುವ ಈ ಜನಕ್ಕೆ ಅಕ್ಕಿ ಗೋಧಿ ಮುಂತಾದ ಧಾನ್ಯಗಳೆಂದರೆ ಅದೇ ಅತ್ಯಂತ ದುರ್ಲಭವಾದ ವಸ್ತು. ಸಾಮಾನ್ಯ ಮನುಷ್ಯರು ತಿನ್ನಲಾರದ ಗಡ್ಡೆ ಗೆಣಸುಗಳು ಇವರ ಆಹಾರ. ಅವು ಸಿಗದಿದ್ದರೆ ಉಪವಾಸವೇ ಗತಿ. ಧೀರ್ಘಕಾಲದ ಉಪವಾಸ, ಅರೆಹೊಟ್ಟೆ ಮತ್ತು ಪೌಷ್ಟಿಕಾಂಶಗಳ ಕೊರತೆಯಿಂದಾಗಿ ಕಾಲಾಹಂಡಿಯ ಜನ ವಿವಿಧ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಇಲ್ಲಿ ಹಸಿವಿನಿಂದ ಸತ್ತವರ ಸಂಖ್ಯೆ ಐದುನೂರಕ್ಕೂ ಮಿಕ್ಕಿದೆಯೆಂದು ಪತ್ರಿಕೆಗಳೇ ವರದಿ ಮಾಡಿವೆ.

ಇಂತಹ ದಾರುಣ ಸ್ಥಿತಿಯಲ್ಲಿರುವ ಕಾಲಾಹಂಡಿಯ ಜನಕ್ಕೆ ಪಶ್ಚಿಮ ಬಂಗಾಳದ ಸಿ.ಪಿ.ಐ. (ಎಂ), ಅಖಿಲ ಭಾರತ ಕಿಸಾನ ಸಭಾ, ವಿದ್ಯಾರ್ಥಿ, ಯುವಜನ ಸಂಘಟನೆಗಳು ಪಕ್ಷದ ಒರಿಸ್ಸಾ ರಾಜ್ಯ ಘಟಕದ ಕೋರಿಕೆಯಂತೆ ನೆರವು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡವು. ಕಳೆದ ಮೇ 23ರಂದು ಸಿ ಪಿ.ಐ.(ಎಂ)ನ ಪ. ಬಂಗಾಳ ರಾಜ್ಯ ಸಮಿತಿ "ಕಾಲಾ ಹಂಡಿ" ದಿನವನ್ನು ಆಚರಿಸಿ ರಾಜ್ಯಾದ್ಯಂತ ಕಾಲಾಹಂಡಿಯ ಜನರಿಗಾಗಿ ನೆರವನ್ನು ಸಂಗ್ರಹಿಸಿತು.

ಕಾಲಾಹಂಡಿಯನ್ನು ಸಂದರ್ಶಿಸಿದ ಅಖಿಲ ಭಾರತ ಕಿಸಾನ ಸಭಾದ ಬಿಪ್ಲವದಾಸ ಗುಪ್ತ ಅವರು ಪ್ರತ್ಯಕ್ಷ ವರದಿ ನೀಡಿರುವ ಪ್ರಕಾರ ಗುಡ್ಡಗಾಡುಗಳಿಂದ ಆವೃತವಾದ ಕಾಲಾಹಂಡಿಯಲ್ಲಿ ಹದಿನೆಂಟನೇ ಶತಮಾನ ಅಥವಾ ಅದಕ್ಕಿಂತಲೂ ಹಿಂದಿನ ಪರಿಸ್ಥಿತಿ ಗೋಚರಿಸುತ್ತಿದೆ. ದೇಶವನ್ನು ಹೇಗಾದರು ಇಪ್ಪತ್ತೊಂದನೆ ಶತಮಾನಕ್ಕೆ ಕೊಂಡೊಯ್ಯಲು ಉನ್ನತ ತಾಂತ್ರಿಕತೆಗೆ ಜೋತು ಬಿದ್ದಿರುವ ನಮ್ಮ ಕೇಂದ್ರ ಸರ್ಕಾರಕ್ಕೆ ಕಾಲಾ ಹಂಡಿಯಲ್ಲಿ ಹಸಿವಿನಿಂದ ಸಾಯುತ್ತಿರುವ ಜನ ಯಾಕೆ ಬೇಕು ? ಕಳೆದ ವರ್ಷ ಪ್ರಧಾನಿ ರಾಜೀವ್‌ಗಾಂಧಿ ಈ ಪ್ರದೇಶಕ್ಕೆ ಭೇಟಿ ನೀಡಿ ಇಲ್ಲಿ ಏನೋ ಅಭಿವೃದ್ಧಿ ಕಾರ್ಯ ನಡೆಯಲಿದೆಯೆಂಬ ಭ್ರಮೆ ಸೃಷ್ಟಿಸಿದರು. ಕಾಲಾಹಂಡಿಯಲ್ಲಿ ಜನ ಉಪವಾಸದಿಂದ ಸಾಯುತ್ತಿರುವುದರ ಬಗ್ಗೆ ಮತ್ತು ಅಲ್ಲಿನ ಕಾರ್ಮಿಕ ಶೋಷಣೆಯ ಕುರಿತು ವಿಚಾರಣೆ ನಡೆಸುವಂತೆ ಸುಪ್ರೀಂಕೋರ್ಟ್ ಜಿಲ್ಲಾ ನ್ಯಾಯಾಧೀಶರಿಗೆ ಆದೇಶ ಮಾಡಿತ್ತು. ಈ ವಿಚಾರಣೆಯ ವರದಿ ಇನ್ನೂ ಬರಬೇಕಷ್ಟೆ. ಒರಿಸ್ಸಾ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈಪ್ರದೇಶದ ಕುರಿತು ತೋರಿಸಿರುವ ಅಸಡ್ಡೆಯನ್ನು ನೋಡಿದರೆ ಬಹುಶಃ ಕಾಲಾಹಂಡಿಯ ಜನ ಇಪ್ಪತ್ತೊಂದನೇ ಶತಮಾನಕ್ಕೆ ಹೋಗಬೇಕಾದವರಲ್ಲವೆಂದು ಸರ್ಕಾರ ಭಾವಿಸಿರುವಂತಿದೆ.

ಬರ ಪೀಡಿತ
ಒರಿಸ್ಸಾದ ಕಾಲಾಹಂಡಿಯಲ್ಲಿ
ಸಿ.ಪಿ.ಐ(ಎಂ) ಪರಿಹಾರ
ಕೇಂದ್ರಗಳು, ಚಿಕಿತ್ಸಾ ಕೇಂದ್ರಗಳು
ಅಲ್ಲಿಯ ಜನರನ್ನು ಮಾತ್ರವಲ್ಲ
ದೇಶದ ಗಮನವನ್ನೇ ಸೆಳೆದಿದೆ.

ಪರಿಹಾರ ಕಾರ್ಯಕ್ಕೆ ಅಡ್ಡಿ

ಪ.ಬಂಗಾಳದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ತನ್ನ ಇತರ ಸಾಮುದಾಯಿಕ ಸಂಘಟನೆಗಳ ಜೊತೆಗೂಡಿ ಒರಿಸ್ಸಾ ರಾಜ್ಯ ಸಮಿತಿ ನಡೆಸುತ್ತಿರುವ ಪರಿಹಾರ ಕಾರ್ಯಕ್ಕೆ ಹೆಚ್ಚಿನ ಪ್ರಮಾಣದ ಸಹಾಯ ನೀಡಿರುವುದು ಈಹಿನ್ನೆಲೆಯಲ್ಲಿ. ಇದರಲ್ಲಿ ಮಾನವೀಯತೆಯ ದೃಷ್ಟಿಯೇ ಮುಖ್ಯ. ಆದರೆ ಸದಾಕಾಲ ಭ್ರಷ್ಟಾಚಾರದಲ್ಲೇಮುಳುಗಿ ಜನತೆಯ ಸಂಕಷ್ಟಗಳ ಕಡೆಗೆ ಕುರುಡಾಗಿರುವ ಕಾಂಗ್ರೆಸ್(ಐ) ಮತ್ತು ಅದರ ರಾಜ್ಯ ಸರಕಾರಕ್ಕೆ ಈ ಪರಿಹಾರ ಕಾರ್ಯದ ಅಮೋಘ ಯಶಸ್ವಿನಿಂದ ಸಹಿಸಲಾರದಷ್ಟು ಹೊಟ್ಟೆಯುರಿ ಉಂಟಾಗಿದೆ. ಕಾಂಗ್ರೆಸ್(ಐ)ಮುಂದಾಳುಗಳು ಮುಖ್ಯವಾಗಿ ಪ.ಬಂಗಾಳ ಪಿ.ಸಿ.ಸಿ.ಐ. ಅಧ್ಯಕ್ಷ ಪ್ರಿಯರಂಜನ ದಾಸಮುನ್ಸಿಯಂಥವರು ಈ ಹೊಟ್ಟೆಕಿಚ್ಚು ತಡೆಯಲಾರದೆ ತಮಗೆ ತೋಚಿದಂತೆ ಮಾತನಾಡಲಾರಂಭಿಸಿದ್ದಾರೆ.

ಹಲವಾರು ಬರಿಗಾಲು ವೈದ್ಯರನ್ನು ಒಳಗೊಂಡಿದ್ದ ಜನತಾ ಪರಿಹಾರ ಸಮಿತಿ ಔಷಧಿ, ಮಾತ್ರೆ, ಇಂಜೆಕ್ಷನ್ ಇತ್ಯಾದಿಗಳನ್ನು ಹಂಚಲುಪ್ರಾರಂಭಿಸಿದಾಗ ಪ್ರಿಯರಂಜನದಾಸಮುನ್ಸಿ ಅವೆಲ್ಲ ಅವಧಿಮೀರಿ ಹೋದ ಕಳಪೆ ಔಷಧವೆಂದೂ, ಯಾರೂ ಅದನ್ನು ಸೇವಿಸಕೂಡದೆಂದೂ ಅಪಪ್ರಚಾರ ಪ್ರಾರಂಭಿಸಿದರು. ಒರಿಸ್ಸಾ ಸರಕಾರ ಔಷಧಿಗಳನ್ನು ವಶಪಡಿಸಿಕೊಂಡು ಅವನ್ನು ಪರೀಕ್ಷೆಗೊಳಪಡಿಸಿತು. ಈ ಔಷಧಿಗಳು ಉತ್ತಮ ಮಟ್ಟದವುಗಳೆಂದು ಪ್ರಯೋಗಾಲಯದ ವರದಿಗಳು ದೃಢಪಡಿಸಿದವು.ಡಾ.ಬಿ.ಪಿ. ಮೊಹಂತಿಯವರ ನೇತೃತ್ವದ ಪಶ್ಚಿಮ ಬಂಗಾಳದ ವೈದ್ಯಕೀಯ ತಂಡವನ್ನು ಒರಿಸ್ಸಾ ಸರ್ಕಾರಅನವಶ್ಯಕವಾಗಿ ಸತಾಯಿಸಿತು.

ಪರಿಹಾರ ಕೇಂದ್ರಗಳ ಜನಪ್ರಿಯತೆ

ಸಿ.ಪಿ.ಐ. (ಎಂ) ನ ನೇತೃತ್ವದಲ್ಲಿ ನಡೆಯುತ್ತಿರುವ ಪರಿಹಾರ ಕೇಂದ್ರಗಳು ಕಾಲಾಹಂಡಿಯಲ್ಲಿ ಅಪೂರ್ವ ಜನಪ್ರಿಯತೆಗಳಿಸಿವೆ. ಇದು ಕಾಂಗ್ರೆಸ್ (ಐ) ಪಟ್ಟ ಭದ್ರರಿಗೆ ಇನ್ನಷ್ಟು ಅಸೂಯೆಯುಂಟು ಮಾಡಿದೆ. ಪರಿಹಾರ ಕೇಂದ್ರಗಳಲ್ಲಿ ಜನ ಕೆಂಬಾವುಟ ಹಿಡಿಯುವುದಕ್ಕೂ ಒರಿಸ್ಸಾ ಸರಕಾರ ಅಪೇಕ್ಷಿಸಿದೆ. ಒರಿಸ್ಸಾ ಮುಖ್ಯಮಂತ್ರಿ ಕಾಲಾಹಂಡಿಯನ್ನು ಸಂದರ್ಶಿಸುವುದಕ್ಕೆ ಎರಡು ದಿನ ಮೊದಲೇ ಅಲ್ಲಿನ ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾ ಸಮಿತಿ ಅಧ್ಯಕ್ಷ ಕೃಷ್ಣಕಾಂತ ದ್ವಿವೇದಿಯವರನ್ನು ದಸ್ತಗಿರಿ ಮಾಡಲಾಗಿತ್ತು.

ಹಸಿವು ಮತ್ತು ರೋಗಗಳಿಂದ ಸಂತ್ರಸ್ತರಾಗಿರುವ ಕಾಲಾಹಂಡಿಯ ಬಡ ಜನತೆಗೆ ಸಿ.ಪಿ.ಐ.(ಎಂ) ಮಾನವೀಯ ದೃಷ್ಟಿಯಿಂದ ನೆರವು ನೀಡುತ್ತಿರುವುದಕ್ಕೆ ಕಾಂಗ್ರೆಸ್ (ಐ) ಪ್ರಭೃತಿಗಳು ಇಷ್ಟೆಲ್ಲ ಅಡಚಣೆ ಒಡ್ಡಿದರೂ ಪರಿಹಾರ ಕಾರ್ಯ ಯಶಸ್ವಿಯಾಗಿ ನಡೆದುದಲ್ಲದೆ 'ಭಾರತದ ಇಥಿಯೋಪಿಯ'ವೆಂದು ಕರೆಯಲ್ಪಟ್ಟಿರುವ ಕಾಲಾಹಂಡಿಯ ಕುರಿತು ಹೊರಗಿನ ಪ್ರಪಂಚಕ್ಕೆ ತಿಳುವಳಿಕೆ ನೀಡಿದೆ.

ಬಹು ಅಭ್ಯರ್ಥಿ ಕ್ಷೇತ್ರಗಳ ಪ್ರಯೋಗ

ಸೋವಿಯತ್ ಒಕ್ಕೂಟದಲ್ಲಿ ಜೂನ್ 21 ರಂದು ಜನತಾ ಪ್ರತಿನಿಧಿಗಳ (ಡೆಪ್ಯೂಟಿಗಳು) ಸ್ಥಳೀಯ ಸೋವಿಯತ್‌ಗಳಿಗೆ ಚುನಾವಣೆಗಳು ನಡೆದುವು. ಸರಕಾರದ ಈ ಅಂಗಗಳಿಗೆ ಸುಮಾರು 2,300,000 ಜನರು ಚುನಾಯಿತರಾದರು. ಈ ಚುನಾಯಿತರಲ್ಲಿ ಶೇಕಡಾ 40 ಮಂದಿ ಕಾರ್ಮಿಕರಾಗಿದ್ದಾರೆ. ಸರಿಸುಮಾರಾಗಿ ಐವರು ಡೆಪ್ಯೂಟಿಗಳಲ್ಲಿ ಓರ್ವ ಸಾಮೂಹಿಕ ಕ್ಷೇತ್ರಗಳ ರೈತನಾಗಿರುತ್ತಾನೆ. ಡೆಪ್ಯೂಟಿಗಳಲ್ಲಿ ಅರ್ಧಾಂಶದಷ್ಟು ಮಹಿಳೆಯರಾಗಿರುವರು. ಈ ಹಿಂದಿನ ಸೋವಿಯೆತ್‌ಗಳ ಅಂಕೆ–ಸಂಖ್ಯೆಗಳೊಂದಿಗೆ ಹೋಲಿಸಿದರೆ ಈ ಬಾರಿ ಅರ್ಧಾಂಶಕ್ಕೂ ಹೆಚ್ಚು ಮಂದಿ ಹೊಸಬರಾಗಿರುವುದು ಕಂಡು ಬರುತ್ತದೆ.

ಈ ಬಾರಿಯ ಚುನಾವಣೆಗೆ ವಿಶೇಷ ಪ್ರಾಮುಖ್ಯ ನೀಡಲಾಗಿತ್ತು. ಸೋವಿಯೆತ್ ಒಕ್ಕೂಟದಲ್ಲಿನ ಸಮಗ್ರ ಸಾರ್ವಜನಿಕ ಜೀವನವನ್ನು ಜನತಂತ್ರೀಕರಿಸುವ ಹಾಗೂ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಾಧನೆಯ ವೇಗವನ್ನು ವರ್ಧಿಸುವ ದಿಸೆಯಲ್ಲಿ ಪ್ರಯತ್ನಗಳು ಸಾಗಿರುವ ಸನ್ನಿವೇಶದಲ್ಲಿ ಈ ಚುನಾವಣೆಗಳು ನಡೆದಿವೆ. ಸೋವಿಯತ್ ಒಕ್ಕೂಟದಲ್ಲಿ ಈ ಪ್ರಕ್ರಿಯೆ "ಪೆರಿಸ್ತ್ರೋಯಿಕಾ" (ಪುನರ್ರಚನೆ) ಎಂದು ಚಿರಪರಿಚಿತವಾಗಿದೆ.

ದೇಶದ 162 ಪ್ರದೇಶ ಹಾಗೂ ಪ್ರಾಂತಗಳಲ್ಲಿ ರಚಿಸಲಾದ "ಬಹು ಅಭ್ಯರ್ಥಿಗಳ ಮತಕ್ಷೇತ್ರ" ಗಳಲ್ಲಿನ ಚುನಾವಣಾ ಫಲಿತಾಂಶಗಳಿಗೆ ವಿಶೇಷ ಗಮನ ನೀಡಲಾಯಿತು. ಈ ಪ್ರಯೋಗದಲ್ಲಿ ಪ್ರತಿ ಮತಕ್ಷೇತ್ರದಿಂದ ನಿಗದಿಯಾದ ಸೋವಿಯೆತ್‌ಗೆ ಹಲವು ಮಂದಿ ಡೆಪ್ಯೂಟಿಗಳು ಚುನಾಯಿಸಲ್ಪಟ್ಟರು. ಅಭ್ಯರ್ಥಿಗಳ ಸಂಖ್ಯೆಯು ಡೆಪ್ಯೂಟಿಗಳ ಸ್ಥಾನಗಳ ಸಂಖ್ಯೆಯನ್ನು ಮೀರಿತ್ತು.

ಹಾಗಿದ್ದರೆಈ ಚುನಾವಣಾ ಪ್ರಚಾರದ "ಅನೌಪಚಾರಿಕ, ಫಲಿತಾಂಶಗಳೇನು? ಪ್ರಮುಖ ಸಾಧನೆಯೆಂದರೆ ಸರಕಾರದ ಅಂಗಗಳನ್ನು ರಚಿಸುವಲ್ಲಿ ಜನತೆಯ ಮನಃಪೂರ್ಣ ಸಹಭಾಗಿತ್ವ. ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಯಲ್ಲೇ ಇದು ಪ್ರಧಾನವಾಗಿ ಅಭಿವ್ಯಕ್ತವಾಗಿದೆ. "ಮೇಲಿನಿಂದ" ಸೂಚನೆಗಳಿಗೆ ವಿರುದ್ಧವಾಗಿಯೇ ಅನೇಕ ಕಾರ್ಮಿಕರ ಸಾಮೂಹಿಕ ಕ್ಷೇತ್ರಗಳುತಮ್ಮ ಹೆಸರುಗಳನ್ನು ಸೂಚಿಸಿದರು ಹಾಗೂ ಅವರ ಆಯ್ಕೆಗೆ ಆಗ್ರಹ ಪಡಿಸಿದರು. ಇದರ ಫಲಿತಾಂಶವಾಗಿ ಮಾಸ್ಕೋದಲ್ಲಿ ನಗರ ಸೋವಿಯೆತ್‌ನ ಅಭ್ಯರ್ಥಿಗಳಲ್ಲಿ ಮೂರನೇ ಎರಡಷ್ಟು ಮಂದಿ ಜಿಲ್ಲಾ ಸೋವಿಯೆತ್‌ಗಳ ಅಭ್ಯರ್ಥಿಗಳಲ್ಲಿ ಶೇಕಡಾ 80 ಭಾಗದಷ್ಟು ಅಭ್ಯರ್ಥಿಗಳ ಬದಲಿ ಅಭ್ಯರ್ಥಿಗಳು ಕುರಿತು ತೀವ್ರ ಚರ್ಚೆಗಳಾದ ನಂತರದಲ್ಲೇ ಸೂಚಿತರಾದರು.

ಈ ಚುನಾವಣೆಗಳ ವೇಳೆಯಲ್ಲಿ ಬಹು ಅಭ್ಯರ್ಥಿಗಳ ಮತ ಕ್ಷೇತ್ರಗಳಲ್ಲಿ "ಮತಗಳಿಗಾಗಿ" ಅತ್ಯಂತ ಬಲಿಷ್ಠ ಹೋರಾಟ ಕಂಡುಬಂದಿತು. ಮೊದಲೇ ನಿರೀಕ್ಷಿಸಿದ್ದಂತೆ 90,000 ಸ್ಥಾನಗಳಿಗೆ ಸುಮಾರು 1,20,000 ಭ್ಯರ್ಥಿಗಳು ನಿಂತಿದ್ದರು. ಅವರಲ್ಲಿ ಸುಮಾರು ಸಾವಿರ ಮಂದಿ ಡೆಪ್ಯೂಟಿಗಳಾಗಿಆಯ್ಕೆಯಾಗಲಿಲ್ಲ. ಏಕೆಂದರೆ ಅವರಿಗೆ ಅರ್ಧಾಂಶಕ್ಕಿಂತಲೂ ಕಡಿಮೆ ಮತಗಳು ಬಂದಿದ್ದುವು. ಈ ಹಂತವನ್ನು ದಾಟಿ ಬಂದವರನ್ನು ಎರಡು ದರ್ಜೆಗಳಿಗಾಗಿ ವಿಂಗಡಿಸಲಾಯಿತು. ಬಹುದೊಡ್ಡ ಸಂಖ್ಯೆಯಲ್ಲಿ ಮತಗಳನ್ನು ಗಳಿಸಿದ ಅಭ್ಯರ್ಥಿಗಳು (ಡೆಪ್ಯೂಟಿಗಳ ಸಂಖ್ಯೆಯನ್ನು ಅವಲಂಬಿಸಿ) ಸೋವಿಯೆತ್‌ಗಳ ಪರಿಪೂರ್ಣ ಸ್ವರೂಪ ಪ್ರತಿನಿಧಿ (ಡೆಪ್ಯೂಟಿಗಳು)ಗಳೆನಿಸುವರು. ಇತರರು "ಕಾಯ್ದಿರಿಸಿದ ಡೆಪ್ಯೂಟಿಗಳ" ಸ್ಥಾನಮಾನ ಪಡೆಯುವರು.

ಸೋವಿಯೆತ್ ದೇಶದಲ್ಲಿ
ಪ್ರಜಾಸತ್ತೆಯನ್ನು ವಿಸ್ತರಿಸಿ
ಪ್ರತಿಪ್ರಜೆಗೂ ದೇಶದ ಆಗುಹೋಗುಗಳನ್ನುನಿರ್ಧರಿಸುವ
ಹಕ್ಕು ನೀಡಲಾಗುತ್ತಿದೆ.
ಒಂದು ಕ್ಷೇತ್ರದಲ್ಲಿ ಒಬ್ಬನೇ ಅಭ್ಯರ್ಥಿಯ ಪದ್ಧತಿಗೆ
ಬದಲಾಗಿ ಬಹು ಅಭ್ಯರ್ಥಿ ಪದ್ಧತಿಯನ್ನು
ಜಾರಿಗೆ ತಂದಿರುವಲ್ಲಿನ ಅನುಭವ
ಸೋವಿಯೆತ್ ಸಮಾಜಕ್ಕೊಂದು ಹೊಸ ದಿಕ್ಸೂಚಿ.

ಈ ಚುನಾವಣೆಗಳು ಸ್ಪರ್ಧೆಯ ಎಲ್ಲ ಹಂತಗಳಲ್ಲೂ ಮತದಾರರು ಮತ್ತು ಅವರ ಅಭ್ಯರ್ಥಿಗಳ ಹೆಚ್ಚು ಸಕ್ರಿಯವಾದ ಪಾತ್ರವನ್ನು ತೋರಿಸಿಕೊಟ್ಟವೆ. ಆದರೆ ಕೆಲವರು ಬದಲಾವಣೆಯ ವಿರೋಧಿಗಳಾಗಿ ಈ ಎಲ್ಲಾ ಕ್ರಮಗಳಿಗೆ ಹೊಂದಿಕೊಳ್ಳಲು ಪ್ರಯತ್ನಪಡೆದ ಹಳೆಯ ನಿಲುವುಗಳಿಗೆ ಹೇಗೆ ಜೋತುಬಿದ್ದಿರುವರೆಂಬುದನ್ನು ಅವುಬಯಲು ಮಾಡಿವೆ. ಸೋವಿಯೆತ್ ಒಕ್ಕೂಟದ ಜನತಾ ಪ್ರತಿನಿಧಿಗಳ (ಡೆಪ್ಯೂಟಿಗಳ)ಪತ್ರಿಕೆ ಇಜ್ವೆಸ್ತಿಯಾ ಈ ಚುನಾವಣೆಯನ್ನು ದೇಶದ ರಾಜಕೀಯ ಜೀವನದಲ್ಲಿ ಪ್ರಜಾಸತ್ತೆ ವಿಸ್ತಾರವಾಗಬೇಕು. ಎನ್ನುವ ಪ್ರಜಾಸತ್ತಾವಾದಿಗಳ ಹಾಗೂಅಧಿಕಾರಿಶಾಹಿತ್ವಕ್ಕೆ ಪೆಟ್ಟು ಬಿದ್ದಿರುವವರ ನಡುವಣ ಶಕ್ತಿ ಪರೀಕ್ಷೆಯಾಗಿದೆ ಎಂದು ಕರೆಯಲು ಪ್ರೇರಣೆ ನೀಡಿತು.

ಈ ಚುನಾವಣೆಗಳನ್ನು "ಬಲ ಪರೀಕ್ಷೆ" ಯೆಂಬ ದೃಷ್ಟಿಯಿಂದ ಪರಿಗಣಿಸುವುದಾದರೆ ಹೆಚ್ಚೆನೆಲ್ಲ ಚುನಾವಣೆಗಳಲ್ಲಿ ಜನತಂತ್ರವೇ ಗೆದ್ದಿದೆ ಎಂದು ಯಾರಿಗಾದರೂ ತಿಳಿದೀತು. ಮತದಾರರಿಂದ ಬೆಂಬಲ ಪಡೆಯುವಲ್ಲಿ ವಿಫಲರಾಗಿರುವ ಅಭ್ಯರ್ಥಿಗಳ "ಸಾಮಾಜಿಕ ಸ್ಥಾನಮಾನ" ದಿಂದಲೂ ಇದನ್ನು ನಿರ್ಣಯಿಸಬಹುದು. ಇಂಥವರು ಹಲವು ಸಮಯದಿಂದ ಉನ್ನತ ಅಧಿಕಾರದ ಹುದ್ದೆಗಳಲ್ಲಿ ಇದ್ದವರು ಹಾಗೂ ತಮ್ಮ ಚಿಂತನಶೈಲಿ ಮತ್ತು ನಡವಳಿಕೆಯಲ್ಲಿ ಬದಲಾವಣೆಯನ್ನು ತರಬಯಸದ ವ್ಯಕ್ತಿಗಳಾಗಿರುವರುಎಂಬುದನ್ನು ನೆನಪಿನಲ್ಲಿರಿಸಿ ಕೊಳ್ಳಬೇಕು. ●

ಭಾರತ ಉತ್ಸವದಲ್ಲಿ ಮಲ್ಲಕಂಬ, ಕಬಡ್ಡಿ ಕ್ರೀಡೆಗಳ ಪ್ರದರ್ಶನ

ಸೋವಿಯೆತ್ ಒಕ್ಕೂಟದಲ್ಲಿ ಆರಂಭವಾಗಿ ಭಾರತ ಉತ್ಸವದಲ್ಲಿ ರಾಷ್ಟ್ರೀಯ ಕ್ರೀಡೆಗಳ ಪ್ರದರ್ಶನ ಜರುಗಲಿದೆ. ಭಾರತದ ವಿವಿಧ ರಾಜ್ಯಗಳನ್ನು ಪ್ರತಿನಿಧಿಸುವ 92 ಕ್ರೀಡಾಪಟುಗಳು (ಅವರಲ್ಲಿ 23 ಮಂದಿ ಮಹಿಳಾ ಕ್ರೀಡಾ ಪಟುಗಳು) ಸೋವಿಯೆತ್ ಒಕ್ಕೂಟದ 100 ನಗರಗಳಲ್ಲಿ ಕ್ರೀಡಾ ಕಾರ್ಯಕ್ರಮಗಳನ್ನು ಪ್ರದರ್ಶಿಸಲಿರುವರು.

ಭಾರತದ ಮಲ್ಲಕಂಬ, ಕಬಡ್ಡಿ, ಆಟ್ಯಾ-ಪಟ್ಯಾ, ಖೋ-ಖೋ, ಕೇರಳದ ಸಮರ ಕ್ರೀಡೆ, ಕಲರಿಪಯಟ್ಟು, ಸಲಿಂಬಮ್, ಗಾಳಿಪಟ ಹಾರಾಟ ಮುಂತಾದ ಕ್ರೀಡೆಗಳನ್ನು ಸೋವಿಯೆತ್ ಜನತೆ ನೋಡಿ ಆನಂದಿಸಲಿರುವರು. ●

REG No. BGW-148 MAG (2) PRB DECR 319/78-79

ವಿಕ್ರಾಂತ್ ಲಾಕೌಟ್ ತೆರವು

ವಿಕ್ರಾಂತ್ ಕಾರಖಾನೆ ಆಡಳಿತ ವರ್ಗ ಕಾರ್ಮಿಕರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಹಠಾತ್ತನೆ 12.6.87 ರಿಂದ ಭಾಗಶಃ ಬೀಗಮುದ್ರೆ ಘೋಷಿಸಿತು. ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ಮಂತ್ರಿಗಳು ಕರೆದ ಸಭೆಯಲ್ಲಿ ಕಾರ್ಮಿಕ ವಿರೋಧಿ ಶರತ್ತುಗಳನ್ನು ಹಾಕಿದರು.

7-7-87 ರಂದು ಮೈಸೂರು ನಗರದಲ್ಲಿ ಹಿಂದೆಂದೂ ನಡೆಯದ ಭಾರಿ ಪ್ರದರ್ಶನ ನಡೆದು ಪುರಭವನದ ಆವರಣದಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು ಆ ಸಭೆಯಲ್ಲಿ ಸಿ.ಐ.ಟಿ.ಯು, ಎ.ಐ.ಟಿಯು.ಸಿ ಪ್ರತಿನಿಧಿಗಳು ಮಾತನಾಡಿ 10-7-87ರ ವಿಧಾನಸೌಧ ಚಲೋ ಕಾರ್ಯಕ್ರಮಕ್ಕೆ ಬೆಂಬಲ ನೀಡಿದರು.

ಕಾರ್ಮಿಕರ ಉತ್ಸಾಹ ದೃಢತೆಯನ್ನು ಕಂಡ ಆಡಳಿತ ವರ್ಗ 8.7.87 ರಂದು ಕಾರ್ಮಿಕ ಸಚಿವ ಎಸ್.ಕೆ ಕಾಂತಾ ರವರ ಮುಂದೆ ಬೇಷರತ್ತಾಗಿ ಕಾರ್ಮಿಕರ ಬೀಗ ಮುದ್ರೆತೆಗೆಯುವುದಾಗಿಯೂ ಎಲ್ಲಾ ಕಾರ್ಮಿಕರನ್ನು ಕೆಲಸದ ಮೇಲೆ ತೆಗೆದುಕೊಳ್ಳುವುದಾಗಿಯೂ ಬೀಗಮುದ್ರೆ ಅವಧಿಗೆ ಸಂಬಳದ ವಿಷಯವನ್ನು ಪಂಚಾಯ್ತಿಗೆ ಒಪ್ಪಿಸಬಹುದೆಂದು ತಿಳಿಸಿ ಬೀಗಮುದ್ರೆ ತೆಗೆದೊಡನೇ 500 ರೂ ಮುಂಗಡ ಹಣವನ್ನು ಕೊಡಬೇಕೆಂದು ತಿಳಿಸಿದರು. ಈ ಒಪ್ಪಂದ ಆಗುವುದಕ್ಕೆ ಸಿ ಐ ಟಿ.ಯು. ಅಧ್ಯಕ್ಷರು ಹಾಗೂ ಸಂಘದ ಸಲಹೆಗಾರರಾದ ಕಾಂ.ಸೂರಿ ಪದಾಧಿಕಾರಿಗಳೊಡನೆ ಭಾಗವಹಿಸಿದ್ದರು. ನಂತರ ಬೆಂಗಳೂರಿಗೆ ಹೊರಡಲು ತಯಾರಾಗಿದ್ದ ಸಾವಿರ ಜನ ಕಾರ್ಮಿಕರನ್ನು ರೈಲು ನಿಲ್ದಾಣದಲ್ಲೇ ತಡೆದು ಕಾಂ.ಸೂರಿ ಮಾತನಾಡಿದರು.

ಮಿಲಿಟರಿ ದಾಳಿ – ತಮಿಳರ ಸಮಸ್ಯೆಗೆ ಪರಿಹಾರವಲ್ಲ

ಶ್ರೀಲಂಕಾದ ತಮಿಳು ಹೋರಾಟಗಾರರನ್ನು ಜಯವರ್ಧನೆ ತನ್ನ ಮಿಲಿಟರಿ ಸೈನ್ಯ ಬಳಕೆಯಿಂದ ಸೋಲಿಸಲು ಸಾಧ್ಯವಿಲ್ಲ. ಭಾರತದ ಸೈನ್ಯ ಶ್ರೀಲಂಕಾದ ಹೋರಾಟಗಾರರಿಗೆ ಬೆಂಬಲಿಸಿ ಗೆಲ್ಲಿಸಲು ಸಾಧ್ಯವಿಲ್ಲ. ತಮಿಳು ಹೋರಾಟಗಾರರು ಹಾಗೂ ಜಯವರ್ಧನೆ ಸರ್ಕಾರ ಪರಸ್ಪರ ಮಾತುಕತೆ ಮೂಲಕ ಅಲ್ಲಿಯ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಯವರಾದ ಕಾ|| ಶಂಕರಯ್ಯನವರು ಶ್ರೀರಾಮಪುರದಲ್ಲಿ ಪಕ್ಷದ ಶ್ರೀರಾಮಪುರ ಶಾಖೆ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು. ಶ್ರೀಲಂಕಾದ ಪೂರ್ವ ಮತ್ತು ಉತ್ತರದಲ್ಲಿ ವಾಸಿಸುವ ಬಹು ಸಂಖ್ಯಾತ ತಮಿಳು ಜನತೆಗೆ ಸ್ವಾಯತ್ತತೆಯ ಆಡಳಿತದ ಭರವಸೆ ನೀಡಿ ಅದನ್ನು ಜಾರಿಗೊಳಿಸದೇ ಹೋದದ್ದು, ಸಿಂಹಳೀಯ-ತಮಿಳು ಭಾಷೆ ಘರ್ಷಣೆ ಉಂಟಾದಾಗ ಅದನ್ನು ಬಗೆ ಹರಿಸದೇ ಹೋದದ್ದು, ತಮಿಳು ಯುವ ಜನತೆಯ ಉದ್ಯೋಗ ಸಮಸ್ಯೆ ಉಲ್ಬಣಗೊಳ್ಳುವಂತೆ ಮಾಡಿದರ ಫಲವೇ ಇಂತಹ ಗಂಭೀರ ಪರಿಸ್ಥಿತಿಗೆ ಕಾರಣವಾಗಿದೆ ಎಂದು ವಿವರಿಸಿದರು. ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಕಾ||ಪಿ.ಕೆ. ಸುಬ್ರಮಣಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಕಾ|| ಗೋಪಾಲಕೃಷ್ಣ ಸ್ವಾಗತಿಸಿ ಸಭೆಯ ಕೊನೆಯಲ್ಲಿ ಕಾ|| ಎನ್.ಕೆ. ಮೂರ್ತಿ ವಂದನಾರ್ಪಣೆ ಮಾಡಿದರು.

ಕಾರ್ಮಿಕ ವಿರೋಧಿ ಉವಾಚಗಳು

(1ನೇ ಪುಟದಿಂದ)

ಮಧ್ಯಂತರ ಪರಿಹಾರ ನೀಡಿ (ಹಿಂದಿನ ಬಾಕಿ ಒಬ್ಬೊಬ್ಬರಿಗೆ 20,000ರೂ. ವರೆಗೆ, ಕೆಲವು ಅಧಿಕಾರಿಗಳಿಗೆ ತಿಂಗಳಿಗೆ 2000ರೂ ವರೆಗೆ ಸಂಬಳದಲ್ಲಿ ಏರಿಕೆ) ಕಾರ್ಮಿಕರು ಶೇ.20ರಷ್ಟುಮಧ್ಯಂತರ ಪರಿಹಾರ ಕೇಳಿದರೆ, ಬೆಲೆ ಏರಿಕೆಗೆ ಪೂರ್ಣವಾಗಿ ಸರಿತೂಗುವಷ್ಟು ತುಟ್ಟಿ ಭತ್ಯೆ ಕೇಳಿದರೆ ಈ ಬೇಡಿಕೆಗಳನ್ನು ನಿರಾಕರಿಸುವ ಬಿ.ಪಿ.ಇ.ಮಾರ್ಗದರ್ಶಕ ಸೂತ್ರಗಳನ್ನು ಕಿತ್ತುಹಾಕಬೇಕು ಎಂದು ಕೇಳಿದರೆ ಅವರ ಮೇಲೆ ಹರಿಹಾಯುತ್ತಾರೆ. ಅಸಂಘಟಿತ ಕಾರ್ಮಿಕರ ಪ್ರಶ್ನೆಯೆತ್ತುತ್ತಾರೆ ಎಂದರು.

ಕಾರ್ಮಿಕ ಕಾನೂನು ತಿದ್ದುಪಡಿ

ಕಾರ್ಮಿಕ ಕಾನೂನನ್ನು ತಿದ್ದುಪಡಿ ಮಾಡುವ ಪ್ರಯತ್ನಕ್ಕೆ ಸರ್ಕಾರ ಮತ್ತೊಮ್ಮೆ ಕೈಹಾಕಿದೆ. ಹಿಂದೆ ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಕಾರ್ಮಿಕರೆಲ್ಲರೂ ಹೋರಾಡಿ ಹಿಮ್ಮೆಟ್ಟಿಸಿದ್ದಾರೆ. ಈ ಕಾನೂನನ್ನು ಇಂಟಕ್ ಕೂಡ ವಿರೋಧಿಸಬೇಕಾಗಿ ಬಂದಿದೆ ಎಂದು ಹೇಳಿದರು.

ಬೀಡಿ ಕಾರ್ಮಿಕರಿಗೆ ಮೋಸ

ಅಸಂಘಟಿತ ಕಾರ್ಮಿಕರ ಪರವಾಗಿ ಮಾತನಾಡುವ ಸಂಗ್ಮಾರವರ ಹಕ್ಕನ್ನು ಪ್ರಶ್ನಿಸಿದ ಕಾ|| ಸೂರಿಯವರು,ಸುಪ್ರಿಂ ಕೋರ್ಟು ನಿರ್ದೇಶನ ನೀಡಿದರೂ 1977ರಿಂದ 30ಲಕ್ಷ ಬೀಡಿ ಕಾರ್ಮಿಕರಿಗೆ ಸಲ್ಲಬೇಕಾದ 50ಕೋಟಿ ರೂ. ಗಳಷ್ಟು ಪ್ರಾವಿಡೆಂಟ್ ಫಂಡನ್ನು ಬೀಡಿ ಕಂಪನಿಗಳ ಮಾಲೀಕರಿಂದ ವಸೂಲಿ ಮಾಡಲು ಪ್ರಯತ್ನ ಮಾಡಿಲ್ಲ. ಒಬ್ಬನೇ ಒಬ್ಬ ಮಾಲೀಕನ ಮೇಲೂ ಕ್ರಮತೆಗೆದುಕೊಂಡಿಲ್ಲ.ಖಾಲಿ ಬುರುಡೆ ಮಾತುಗಳಿಂದೇನು ಪ್ರಯೋಜನ ಎಂದು ಪ್ರಶ್ನಿಸಿದರು.

"ನಿಧಾನ ಕೆಲಸಕ್ಕೆ(Go Slow) ಎಸ್ಮಾ ಬಳಕೆ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ 'ಗೊ ಸ್ಲೊ' ವಿಧಾನವನ್ನು ಬಳಸಿದರೆ ಅದರ ವಿರುದ್ಧ ಎಸ್ಮಾ ಬಳಸಿ ಕಾರ್ಮಿಕರನ್ನು ಹತೋಟಿಗೆ ತರಬೇಕು ಎನ್ನುವ ಮಾತನ್ನು ಕಾರ್ಖಾನೆಗಳ ಮಾಲೀಕರು ಕೂಡ ಕೇಳುತ್ತಿಲ್ಲಆದರೆ ಸಂಗ್ಮಾರವರೇ ಸ್ವಯಮೇಚ್ಛೆಯಿಂದ ಮುಂದೆ ಬಂದಿದ್ದಾರೆ. ಇದು ಏನು ತೋರಿಸುತ್ತದೆ? ಮಾಲೀಕರಿಗೆ, ರಾಜೀವ್‌ಗಾಂಧಿಯವರ ಸರ್ಕಾರದ ಎಲ್ಲಾ ಬೆಂಬಲ ನಿಮಗಿದೆ ಎಂದು ಹೇಳಲು ಸಂಗ್ಮಾ ಇಲ್ಲಿ ಬಂದಂತೆ ಕಾಣುತ್ತದೆ.

ಈ ಎಲ್ಲಾ ಪ್ರಯತ್ನಗಳು, ಕಾರ್ಮಿಕ ಕಾನೂನಿಗೆ ತಿದ್ದುಪಡಿ ತರುವ ಪ್ರಯತ್ನಗಳು ಬಂಡವಾಳಶಾಹಿ ಬಿಕ್ಕಟ್ಟಿನ ತೀವ್ರತೆಯನ್ನು ತೋರಿಸುತ್ತದೆ ಎಂದರು.

ಇ.ಎಸ್.ಐ. ಖಾಸಗೀಕರಣ

ಇದೂ ಕೂಡ ರಾಜೀವ್‌ಗಾಂಧಿಯವರ ಖಾಸಗೀಕರಣ ನೀತಿಯ ಒಂದು ಭಾಗ ಅಷ್ಟೆ. ಈಗಾಗಲೇ ಬಡಜನರನ್ನು ಲೂಟಿ ಮಾಡುತ್ತಿರುವ ಖಾಸಗೀ ನರ್ಸಿಂಗ್ ಹೋಂಗಳ ಕೊಳ್ಳೆಗೆ ಮತ್ತಷ್ಟು ವಿಪುಲ ಅವಕಾಶ ಅಷ್ಟೇ ಹೊರತು ಬೇರೇನಿಲ್ಲ. ದೇಶದ ಜನರ ಆರೋಗ್ಯದ ಬಗ್ಗೆ ಸರ್ಕಾರಕ್ಕಿರುವ ಕಾಳಜಿಯ ಮಟ್ಟವನ್ನು ಇದು ತೋರಿಸುತ್ತದೆ ಅಷ್ಟೆ ಎಂದರು.

ಜುಲೈ 21 ರಂದು, ಸಾರ್ವಜನಿಕ ಉದ್ಯಮಗಳ ಮುಷ್ಕರ, ಆಗಸ್ಟ್3 ರಂದು ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಸಾರ್ವತ್ರಿಕ ಮುಷ್ಕರ, ಮೆರವಣಿಗೆಗಳನ್ನು ಯಶಸ್ವಿ ಮಾಡುವುದರ ಮೂಲಕ ಕರ್ನಾಟಕದ ಕಾರ್ಮಿಕ ವರ್ಗ ಸಂಗ್ಮಾರವರಿಗೆ, ಕೇಂದ್ರ ಸರ್ಕಾರಕ್ಕೆ ಉತ್ತರ ನೀಡುತ್ತದೆ ಎಂದರು.

17 ರಂದು ಪ್ರತಿಭಟನೆ, ಆಗಸ್ಟ್‌ನಲ್ಲಿ ಬಂದ್

[1ನೇ ಪುಟದಿಂದ]

ಮತ್ತು ಸಿ.ಪಿ.ಐ. ರಾಜ್ಯ ಘಟಕಗಳು ಪ್ರತಿಭಟನೆ ಕಾರ್ಯಕ್ರಮವನ್ನು ರಾಜ್ಯ ವ್ಯಾಪಿಯಾಗಿ ವಿಸ್ತರಿಸಬೇಕೆಂದು ಯೋಚಿಸಿವೆ.

ದಿನಾಂಕ 17.7.87 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ವಿದ್ಯುತ್ ಮಂಡಲಿ ಕಛೇರಿಗಳ ಮುಂದೆ ಪ್ರತಿ ಭಟನೆ ಸೂಚಿಸಿಧರಣಿ ಸತ್ಯಾಗ್ರಹ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದರ ನಂತರವೂ ಜನತಾ ಸರ್ಕಾರ ವಿದ್ಯುತ್ ದರ ಇಳಿಸದಿದ್ದಲ್ಲಿ ಆಗಸ್ಟ್ ತಿಂಗಳಲ್ಲಿ 'ಬಂದ್' ಕಾರ್ಯಕ್ರಮ ಹಾಕಲು ಎರಡೂ ಪಕ್ಷಗಳೂ ನಿರ್ಬಂಧಿತವಾಗುತ್ತವೆ ಎಂದು ಸರ್ಕಾರವನ್ನು ಎಚ್ಚರಿಸಲು ಬಯಸುತ್ತೇವೆ. ವಿದ್ಯುತ್ ದರ ಏರಿಕೆ ಹಾಗೂ ಇನ್ನಿತರ ಬೆಲೆಏರಿಕೆಗಳಿಂದ ಪೀಡಿತವಾದ ಜನತೆ ಸಹಸ್ರ ಸಂಖ್ಯೆಯಲ್ಲಿ ಇದಕ್ಕೆ ಬೆಂಬಲ ನೀಡಬೇಕೆಂದು ಕೋರುತ್ತೇವೆ.

ರಾಷ್ಟ್ರಪತಿ ಚುನಾವಣೆ

ಕಾಂಗ್ರೆಸ್ ಸರ್ಕಾರದ ಕೈಯ ಸೂತ್ರದ ಗೊಂಬೆಯಾದ ಡಮ್ಮಿ ರಾಷ್ಟ್ರಪತಿಗೆ ಬದಲಾಗಿ ಸಂವಿಧಾನದತ್ತವಾದ ಅಧಿಕಾರಕ್ಕೆ ಊನಬಾರದಂತೆ ಚೈತನ್ಯಶೀಲ ರಾಷ್ಟ್ರಪತಿ ಬೇಕಾದರೆ ನನಗೆಮತ ನೀಡಿ ಎಂದು ರಾಷ್ಟ್ರಪತಿ ಸ್ಥಾನಕ್ಕೆ ವಿರೋಧ ಪಕ್ಷಗಳ ಅಭ್ಯರ್ಥಿಯಾದ ಶ್ರೀ ವಿ.ಆರ್. ಕೃಷ್ಣಅಯ್ಯರ್ ಘೋಷಿಸಿದ್ದಾರೆ.

ಆದರೂ ಕೆಲವು ಹಿತಾಸಕ್ತಿಗಳು ಅವರ ವಿರುದ್ಧ ಅಪಪ್ರಚಾರ ನಡೆಸಿವೆ. ವಿರೋಧ ಪಕ್ಷಗಳ ಸರ್ವಸಮ್ಮತ ಅಭ್ಯರ್ಥಿಯಾಗಲು ವಿರೋಧ ಪಕ್ಷಗಳ ಮೂರು ಮಂದಿ ಸಮಿತಿಯು ನಿರ್ಧರಿಸಿತು. ಇದನ್ನು ಲೆಕ್ಕಿಸದೆ ಕಮ್ಯೂನಿಸ್ಟ್ ಪಕ್ಷಗಳು ಗೊಂದಲವನ್ನುಂಟು ಮಾಡಿದುವು ಎಂದು ಕೆಲವು ಹಿತಾಸಕ್ತಿಗಳ ಅಪಪ್ರಚಾರವನ್ನು ಅಲ್ಲಗಳೆಯುತ್ತೇವೆ.

ಈ ಸಂದರ್ಭದಲ್ಲಿ ಎಡ ಪಕ್ಷಗಳು ತತ್ವ ನಿಷ್ಠ ನಿಲುನ್ನು ತಳೆದಿವೆ. ಈ ಅಪಪ್ರಚಾರಕ್ಕೆ ಬಲಿಬೀಳದೆ ರಾಷ್ಟ್ರಪತಿ ಚುನಾವಣೆಯ ಮತದಾರರು ಸಂವಿಧಾನವನ್ನು ಎತ್ತಿಹಿಡಿಯಲು ಸಮರ್ಥವಾದ ಅಭ್ಯರ್ಥಿಶ್ರೀ ವಿ.ಆರ್.ಕೃಷ್ಣ ಅಯ್ಯರ್ ಇವರಿಗೆ ಮತ ನೀಡಬೇಕೆಂದು ವಿನಂತಿಸುತ್ತೇವೆ.

ಈ ವಾರ....

★ ಸಂಶೋಧನೆ ಮತ್ತು ಅಭಿವೃದ್ಧಿಯ ಫಲಿತಾಂಶಗಳ ಮಾಹಿತಿಗಳನ್ನು ಹಂಚಿಕೊಳ್ಳಲು ಈಗ(ಸೋವಿಯೆತ್ ಒಕ್ಕೂಟದೊಂದಿಗೆ) ಮಾಡಿಕೊಂಡಿರುವ ಅವಕಾಶ ಬೆಳವಣಿಗೆಯ ಜಾಡಿನಲ್ಲಿ ಸಾಗುತ್ತಿರುವ ಭಾರತದ ದೃಷ್ಟಿಯಿಂದ ಹೆಚ್ಚು ಮಹತ್ವ ಪೂರಿತ.... ಪಾಶ್ಚಿಮಾತ್ಯ ಮಾರುಕಟ್ಟೆಗಳಲ್ಲಿ ಹೆಚ್ಚು ಹೆಚ್ಚು ನಿರ್ಬಂಧಗಳ ಪ್ರವೃತ್ತಿ ತಲೆಯಾಕುತ್ತಿರುವಾಗ ಈ ಬಾಂಧವ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ.

ಪ್ರಜಾವಾಣಿ, ಜುಲೈ 6.

★ ಯೋಜಿತ ರೀತಿಯಲ್ಲಿ ಮುಂದುವರಿದರೆ ಉತ್ತರ ಕನ್ನಡದ ಕಾಡು ಇನ್ನೂ ಶ್ರೀಮಂತಗೊಳ್ಳುತ್ತಲೇ ಅಣುವಿದ್ಯುತ್ ಸ್ಥಾವರ ಕೂಡ ಇರಬಲ್ಲದು. ಆಧುನಿಕತೆಯ ಬಗ್ಗೆ ತಕ್ಕ ನಿಲುವು ತೆಗೆದುಕೊಳ್ಳುವುದು ಈಗ ನಮ್ಮ ಕರ್ತವ್ಯ.

ಲಂಕೇಶ್ ಪತ್ರಿಕೆ, ಜುಲೈ 12.

★ ಕೊಲೆಗಾರ ಯಾವ ಕರುಣೆಗೂ ಅರ್ಹರಲ್ಲವಾದರೂ, ಕೇಂದ್ರ ಸರ್ಕಾರಒಂದುರಾಜಕೀಯ ಪರಿಹಾರಬೇಡುವ ಒಂದು ಪ್ರಮುಖರಾಜಕೀಯ ಪರಿಹಾರ ಬೇಡುವ ಒಂದು ಪ್ರಮುಖ ರಾಜಕೀಯ ಸಮಸ್ಯೆ ತನ್ನ ಕೈಯಲ್ಲಿದೆ ಎಂಬುದನ್ನು ಕಡೆಗಣಿಸಬಾರದು. ನಿಜವಾಗಿ ಪಂಜಾಬ್ ಒಪ್ಪಂದ ತೊಂದರೆಗೀಡಾದ ನಂತರ ಕೇಂದ್ರ ಸರಕಾರ ಪ್ರದರ್ಶಿಸಿದ ಪೂರ್ಣ ರಾಜಕೀಯ ದಿವಾಳಿಕೋರತನ ಉಗ್ರಗಾಮಿಗಳ ಉಳುವಿಗೆ ಮತ್ತು ಅವರು ಮತ್ತಷ್ಟು ಬೆಳೆಯಲು ಅವಕಾಶ ನೀಡಿದೆ.

ಡೆಕ್ಕನ್ ಹೆರಾಲ್ಡ್, ಜುಲೈ 9.

★ ಎಷ್ಟು ನಿಯಮಿತವಾಗಿ ಸೋವಿಯತ್ ಒಕ್ಕೂಟ ಒಂದಾದ ಮೇಲೊಂದರಂತೆ ಬಾಹ್ಯಾಕಾಶ ಸಂಶೋಧನೆಯ ಯಶಸ್ಸುಗಳನ್ನು ಜಾಹೀರುಗೊಳಿಸುತ್ತಿದೆಯೋ ಅಷ್ಟೇ ನಿಯಮಿತವಾಗಿ ಅಮೇರಿಕನ್ ಬಾಹ್ಯಾಕಾಶ ಸಂಸ್ಥೆ ತನ್ನ ವಿಫಲತೆಗಳನ್ನು ತಿಳಿಸಬೇಕಾಗಿ ಬರುತ್ತಿದ್ದು, ಅಮೇರಿಕಾ ಈ ಕ್ಷೇತ್ರದಲ್ಲಿ ತನ್ನ ಮುಂದಾಳತ್ವ ಕಳಕೊಂಡಿದೆ ಎಂದು ಅಲ್ಲಿನ ಬಾಹ್ಯಾಕಾಶ ಸಂಸ್ಥೆಯ ಅಧಿಕಾರಿಗಳು ಭಾವಿಸುತ್ತಿದ್ದಾರೆ. ಅವರಿಗೀಗ ಸೋವಿಯೆತ್ ಒಕ್ಕೂಟದತ್ತ ಹೆಚ್ಚೆಚ್ಚು ಗೌರವ ಭಾವನೆಯಿಂದ, ಹೆಚ್ಚುಕಡಿಮೆ ಅಸೂಯೆಯಿಂದಲೇ ನೋಡುತ್ತಿದ್ದಾರೆ.

ಡಿ.ಪಿ.ಎ. ಸುದ್ದಿ, ಜುಲೈ 9.

★ ರಾಷ್ಟ್ರಪತಿ ಪ್ರಧಾನಿಗಳ ಪರಸ್ಪರ ಸಂಬಂಧ–ಕಾರ್ಯಭಾರಗಳ ಖಚಿತ ಇತ್ಯರ್ಥ ಆಗಬೇಕಾದ ಸಂಧಿ ಕಾಲವಿದು. ವಿ.ಆರ್. ಕೃಷ್ಣ ಅಯ್ಯರ್ ಈ ಚರ್ಚೆಗೆ ಚಾಲನೆ ನೀಡಿದ್ದಾರೆನ್ನಬಹುದು.

ಸುಧಾ, 12–18 ಜುಲೈ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Slutanpet B-53 Phone : 75331 Editor P· RamachandraRao Managing Editor : N. K. Upadhyaya